RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I	ಬೆಂಗಳೂರು, ಶುಕ್ರವಾರ, ಡಿಸೆಂಬರ್ ೨, ೨೦೧೬ (ಮಾರ್ಗಶಿರ ೧೧, ಶಕ ವರ್ಷ ೧೯೩೮)	ನಂ. ೧೩೨೪
Part–I	Bengaluru, Friday, November 2, 2016 (Margasira 11, Shaka Varsha 1938)	No. 1324

ಕರ್ನಾಟಕ ಸರ್ಕಾರದ ನಡವಳಿಗಳು

ಅರಣ್ಯ, ಪರಿಸತ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ: ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರವು ಬೆಂಗಳೂರು ನಗರದಲ್ಲಿರುವ ಕೆರೆಗಳ ಅಭಿವೃದ್ಧಿಗಾಗಿ ಕಾರ್ಪೊರೇಟ್ ವಲಯದ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (CSR) ಅಡಿಯಲ್ಲಿ ಅನುದಾನವನ್ನು ಉಪಯೋಗಿಸಿಕೊಳ್ಳಲು ಅನುಮತಿಯನ್ನು ನೀಡುವುದು ಹಾಗೂ ಕಾರ್ಪೊರೇಟ್ ವಲಯದ ಸಂಸ್ಥೆಗಳೊಂದಿಗೆ ವಿವಿಧ ಇಲಾಖೆ/ಪ್ರಾಧಿಕಾರ/ ಪಾಲಿಕೆಗಳು ಒಡಂಬಡಿಕೆ (MoU) ಮಾಡಿಕೊಳ್ಳಲು ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: 1) ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿಕಾರವು ದಿನಾಂಕ: 13–6–2016 ರಂದು "ಕೆರೆಗಳನ್ನು ಮರಳಿ ತರೋಣ" ಎಂಬ ಶೀರ್ಷಿಕೆಯಡಿಯಲ್ಲಿ ಏರ್ಪಡಿಸಲಾಗಿದ್ದ ಕಾರ್ಯಗಾರ.

ಪ್ರಸ್ತಾವನೆ:–

ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2014ರನ್ವಯ ಪ್ರಾಧಿಕಾರವು ಬೆಂಗಳೂರು ನಗರ ಮತ್ತು ಇತರ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿರುವ ಕೆರೆಗಳನ್ನು ಸಂರಕ್ಷಿಸುವುದು ಕಡ್ಡಾಯವಾಗಿರುತ್ತದೆ.

ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರವು ಬೆಂಗಳೂರಿನಲ್ಲಿ ಕೆರೆಗಳ ಪುನರುಜ್ಜೀವನ ಕೈಗೊಳ್ಳುವ ದೃಷ್ಟಿಯಿಂದ ದಿನಾಂಕ:13–6–2016 ರಂದು "ಕೆರೆಗಳನ್ನು ಮರಳಿ ತರೋಣ" ಎಂಬ ಶೀರ್ಷಿಕೆಯಡಿಯಲ್ಲಿ ಕಾರ್ಯಗಾರ ಒಂದನ್ನು ಏರ್ಪಡಿಸಿದ್ದು, ಈ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ ಬಹುತೇಕ ಕಾರ್ಪೊರೇಟ್ ಸಂಸ್ಥೆಗಳು ಹಾಗೂ ಇತರ ಸಂಘ–ಸಂಸ್ಥೆಗಳು ಅವುಗಳ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (CSR) ಅನುದಾನವನ್ನು ಬಳಸಿ ಬೆಂಗಳೂರಿನ ಕೆರೆಗಳನ್ನು ಪುನರುಜ್ಜೀವನ ಗೊಳಿಸುವ ಬಗ್ಗೆ ಹಾಗೂ ಕೊಳಚೆ ನೀರಿನ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಆಸಕ್ತಿಯನ್ನು ವ್ಯಕ್ತಪಡಿಸಿರುತ್ತವೆ. ಈ ಸಂದರ್ಭದಲ್ಲಿ ಕೆರೆಗಳ ಅಭಿವೃದ್ಧಿ ಕೈಗೊಳ್ಳಲು ಅನುಮತಿ ಪಡೆಯುವ ಸಂಬಂಧ ಯಾವ ಸರ್ಕಾರಿ ಸಂಸ್ಥೆಯನ್ನು ಸಂಪರ್ಕಿಸಬೇಕೆಂಬ ಬಗ್ಗೆ ಸೂಕ್ತ ಮಾರ್ಗಸೂಚಿಯ ಅಗತ್ಯತೆಯನ್ನು ಮನಗಾಣಲಾಗಿದೆ.

ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮದ ಕಲಂ 6 (2) ರಲ್ಲಿ ಪ್ರಾಧಿಕಾರ ಕೆರೆಗಳ ಅಭಿವೃದ್ಧಿಗಾಗಿ ಅನುದಾನವನ್ನು ದೇಣಿಗೆ ರೂಪದಲ್ಲಿ ಮತ್ತು ಕೊಡುಗೆ ರೂಪದಲ್ಲಿ ಪಡೆಯಲು ಅವಕಾಶ ಮಾಡಿಕೊಡಲಾಗಿದೆ. ಮುಂದುವರೆದು, ಕಲಂ 6 (3)ರಲ್ಲಿ ಕೆರೆಗಳ ಅಭಿವೃದ್ಧಿಗಾಗಿ ಪ್ರಾಧಿಕಾರವು ಸರೋವರದ ಅಭಿವೃದ್ಧಿ, ನಿರ್ವಹಣೆ, ಸಂರಕ್ಷಣೆ ಅಥವಾ ರಕ್ಷಣೆಯಲ್ಲಿ ಆಸಕ್ತಿಯಿರುವ ಯಾವುದೇ ಸರ್ಕಾರಿ ಇಲಾಖೆ ಅಥವಾ ಸಂಸ್ಥೆ ಅಥವಾ ಸಂಘ ಅಥವಾ ವ್ಯಕ್ತಿಯು ಮಾಡಿದ ಯಾವುದೇ ಯೋಜನಾ ಪ್ರಸ್ತಾವನೆಗೆ ತಾಂತ್ರಿಕ ಅನುಮೋದನೆಯನ್ನು ನೀಡಲು ಅವಕಾಶವಿರುತ್ತದೆ.

ಅದರಂತೆ, ವಿಷಯವನ್ನು ಸರ್ಕಾರದ ಮಟ್ಟದಲ್ಲಿ ಪರಾಮರ್ಶಿಸಿ ಬೆಂಗಳೂರು ನಗರ ಹಾಗೂ ಇತರೆ ನಗರ ಪ್ರದೇಶಗಳಲ್ಲಿ ಇರುವ ಕೆರೆಗಳನ್ನು ಕಾರ್ಪೋರೇಟ್ ವಲಯದ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಅಡಿಯ ಅನುದಾನವನ್ನು ಬಳಸಿ ಅಭಿವೃದ್ಧಿ ಮಾಡುವಾಗ ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರವು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ನಿರ್ದಿಷ್ಟ ಮಾರ್ಗಸೂಚಿಗಳನ್ನು ಮತ್ತು ಅನುಸರಿಸಬೇಕಾದ ವಿಧಾನಗಳನ್ನು ಅನುಮೋದಿಸಲು ತೀರ್ಮಾನಿಸಲಾಗಿದೆ.

ಅದರಂತೆ ಆದೇಶ.

ಸರ್ಕಾರಿ ಆದೇಶ ಸಂಖ್ಯೆ. ಅಪಜೀ 176 ಇಎನ್‌ವಿ 2016, ಬೆಂಗಳೂರು, ದಿನಾಂಕ: 02.12.2016.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 2014 ರ ಕಲಂ 6 (2) ಮತ್ತು ಕಲಂ 6(3) ರಲ್ಲಿನ ಅವಕಾಶದಡಿಯಲ್ಲಿ ಬೆಂಗಳೂರು ನಗರ ಹಾಗೂ ಇತರೆ ನಗರ ಪ್ರದೇಶಗಳಲ್ಲಿರುವ ಕೆರೆಗಳ ಅಭಿವೃದ್ಧಿಗಾಗಿ ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರವು ಸರೋವರದ ಅಭಿವೃದ್ಧಿ, ನಿರ್ವಹಣೆ, ಸಂರಕ್ಷಣೆ ಅಥವಾ ರಕ್ಷಣೆಯಲ್ಲಿ ಆಸಕ್ತಿಯಿರುವ ಯಾವುದೇ ಸರ್ಕಾರಿ ಇಲಾಖೆ ಅಥವಾ ಸರ್ಕಾರ/ಖಾಸಗಿ ಸಂಸ್ಥೆ, ಸಂಘ ಅಥವಾ ವ್ಯಕ್ತಿಯು ಮಾಡಿದ ಯಾವುದೇ ಯೋಜನಾ ಪ್ರಸ್ತಾವನೆಗೆ ತಾಂತ್ರಿಕ ಅನುಮೋದನೆಯನ್ನು ನೀಡಲು ಹಾಗೂ ಕೆರೆಗಳ ಅಭಿವೃದ್ಧಿಗೆ ಅನುದಾನವನ್ನು ದೇಣಿಗೆ ರೂಪದಲ್ಲಿ ಮತ್ತು ಕೊಡುಗೆ ರೂಪದಲ್ಲಿ ಪಡೆದು ಕೊಳ್ಳಲು ಈ ಕೆಳಗಿನ ವಿಧಾನಗಳನ್ನು ಅನುಮೋದಿಸಿ ಆದೇಶಿಸಲಾಗಿದೆ.

(ಎ) ಕೆರೆಗಳ ಪುನರುಜ್ಜೀವನಕ್ಕಾಗಿ ಕಾರ್ಪೋರೇಟ್ ವಲಯದ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (CSR) ಅಡಿಯಲ್ಲಿ ಅನುದಾನವನ್ನು ಆಕರ್ಷಿಸಿಕೊಂಡು ಈ ಕೆಳಕಂಡ ವಿಧಾನಗಳಲ್ಲಿ ಅನುಷ್ಠಾನಗೊಳಿಸಲು ವಿವಿಧ ಕಾರ್ಪೋರೇಟ್ ಸಂಸ್ಥೆಗಳೊಡನೆ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.

(i). ಸಮಗ್ರ ಯೋಜನಾ ವರದಿಯನುಸಾರ ಕಾರ್ಪೋರೇಟ್ ಸಂಸ್ಥೆ, ನಿವಾಸಿ ಕಲ್ಯಾಣ ಸಂಘ, ಕಾರ್ಪೋರೇಟ್ ಸಂಸ್ಥೆಗಳ ಒಕ್ಕೂಟ ಮತ್ತು ಇತರೆ ಸಂಸ್ಥೆಗಳಿಗೆ ಕೆರೆ/ ಸರೋವರಗಳನ್ನು ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದೊಡನೆ ಒಡಂಬಡಿಕೆ ಮಾಡಿಕೊಂಡ ನಂತರ ಅಭಿವೃದ್ಧಿ ಹಾಗೂ ಪುನರುಜ್ಜೀವನಗೊಳಿಸಲು ಅನುಮತಿಸುವುದು.

(ii) ಆಸಕ್ತಿ ಹೊಂದಿರುವ ಒಂದು ಅಥವಾ ಹೆಚ್ಚು ಕಂಪನಿಗಳು ಒಟ್ಟಿಗೆ ಸೇರಿ ಜಂಟಿಯಾಗಿ ಕೆರೆಯನ್ನು ಅಭಿವೃದ್ಧಿ ಮಾಡಲು ಮುಂದೆ ಬಂದಲ್ಲಿ, ಅಂತಹ ಕಾರ್ಪೋರೇಟ್ ಕಂಪನಿ ಸಮೂಹಕ್ಕೆ ಒಡಂಬಡಿಕೆಯ ಮೂಲಕ ಕೆರೆಗಳ/ ಸರೋವರಗಳ ಅಭಿವೃದ್ಧಿ ಮತ್ತು ಪುನರುಜ್ಜೀವನಕ್ಕಾಗಿ ಅನುಮತಿಸುವುದು.

(iii) ಆಸಕ್ತಿ ಹೊಂದಿರುವ ಸರ್ಕಾರಿ/ಖಾಸಗಿ ಸಂಸ್ಥೆ/ಸಂಘ/ವ್ಯಕ್ತಿಗಳಿಂದ ಕೊಡುಗೆ, ಅನುದಾನ ಅಥವಾ ವಂತಿಗೆಯನ್ನು ಪ್ರತೀ ಕೆರೆ ಅಥವಾ ಕೆರೆಗಳ ಸಮೂಹಕ್ಕಾಗಿ ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ನಿಧಿಯ ರೂಪದಲ್ಲಿ ಸಂಗ್ರಹಿಸಿ, ಸದರಿ ನಿಧಿಯಿಂದ ಪ್ರಾಧಿಕಾರವೇ ಕೆರೆಗಳ ಅಭಿವೃದ್ಧಿ ಮತ್ತು ಪುನರುಜ್ಜೀವನವನ್ನು ಕೈಗೊಳ್ಳುವುದು.

(ಬಿ) ಅನುಬಂಧದಲ್ಲಿ ನೀಡಲಾಗಿರುವ ಮಾದರಿ ಒಡಂಬಡಿಕೆಯಂತೆ (Model MoU) ಕಾರ್ಪೋರೇಟ್ ವಲಯದ ಸಂಸ್ಥೆ ಹಾಗೂ ಸರ್ಕಾರದ ವಿವಿಧ ಇಲಾಖೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.

(ಸಿ) ಒಡಂಬಡಿಕೆ ಒಪ್ಪಂದಕ್ಕೆ, ಅಗತ್ಯವಿರುವ ಕಡೆಗಳಲ್ಲಿ, ತಿದ್ದುಪಡಿಮಾಡಿಕೊಳ್ಳಲು, ಸರ್ಕಾರದ ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆಯ ಅನುಮೋದನೆಯನ್ನು ಪಡೆಯತಕ್ಕದ್ದು, ಹಾಗೂ ಅರಣ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆಯು ಸೂಕ್ತವಿದ್ದಲ್ಲಿ ಕಾನೂನು ಇಲಾಖೆಯ ಸಹಮತದೊಂದಿಗೆ ಅಂತಹ ಅನುಮೋದನೆ ನೀಡತಕ್ಕದ್ದು.

ಈ ಆದೇಶವನ್ನು ಸಚಿವ ಸಂಪುಟದ ದಿನಾಂಕ: 23.11.2016ರ ಸಭೆಯ ಕ್ರ.ಸಂ. 9, ಪ್ರಕರಣ ಸಂಖ್ಯೆ: ಸಿ: 555/2016 ರ ಅನುಮೋದನೆಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರಾಮಚಂದ್ರ
ಸರ್ಕಾರದ ಕಾರ್ಯದರ್ಶಿ
(ಪರಿಸರ ಮತ್ತು ಜೀವಿಶಾಸ್ತ್ರ)
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ.

PROCEEDINGS OF THE GOVERNMENT OF KARNATAKA
FOREST, ENVIRONMENT AND ECOLOGY SECRTARIAT

Sub: Approval for conservation, development and rejuvenation of lakes in Bengaluru by using CSR funds from corporate bodies.

Read: Workshop organized by the Karnataka Lake Conservation and Development Authority under the caption "Bring Back Lakes" on June 13, 2016 in Bengaluru.

Preamble:

As per the Karnataka Lake Conservation and Development Authority Act, 2014, it is the mandate of the Authority to conserve lakes in Bengaluru and other city corporations.

Karnataka Lake Conservation and Development Authority organized a workshop "Bring Back Lakes" on June 13, 2016 in Bengaluru with the objective of involving corporate bodies to undertake rejuvenation of Lakes in Bengaluru. Many corporate bodies who participated in the said workshop have expressed their interest in undertaking rejuvenation of Lakes and establishment of STPs using their Corporate Social Responsibility (CSR) funds. In this context, it was felt necessary to have clear guidelines with regard to the institution to be contacted in this regard.

As per Section 6(2) of the Karnataka Lake Conservation and Development Authority Act, there is a provision to obtain donations and contributions from the public. As per the Section 6 (3) of the Act, there is a provision to accord technical sanction by the Authority to any project proposal prepared by any Government department or agency or association or any person who is interested in development, maintenance, conservation or protection of lakes.

The subject matter has been discussed at the government level at length in the above context. A decision has been taken to approve the specific guidelines and the modalities that the Karnataka Lake Conservation and Development Authority should follow, while undertaking development of Lakes in Bengaluru and other city corporations utilizing the Corporate Social Responsibility (CSR) funds from the Corporate Sector.

Hence this order.

GOVERNMENT ORDER NO: FEE 176 ENV 2016, BANGALORE, Dated 02 .12.2016

In view of the facts and circumstances traversed in the preamble, the Government is pleased to approve the following procedure to be followed by the Karnataka Lake Conservation and Development Authority while accepting donations and contributions from the public and according technical sanction to any project proposal prepared by any Government Department or Government / Private agency or association or any person who is interested in development, maintenance, conservation or protection of lakes under section 6(2) and 6(3) of the Karnataka Lake Conservation and Development Authority Act, 2014 for undertaking rejuvenation of lakes in Bengaluru and other City Corporations.

(a) The Karnataka Lake Conservation and Development Authority shall tap Corporate Social Responsibility funds for rejuvenation of lakes in the following modes and enter into MoU with such corporate bodies.

i) Permitting corporate agencies, Resident Welfare Associations, consortium of corporates, institutions to develop and rejuvenate lakes by entering into MoU with such agency.

ii) In case one or more companies come forward to jointly develop lakes, the group of corporate bodies shall be permitted to take up development and rejuvenation by entering into a joint MoU.

iii) The donations/contribution from interested Government/ private agency/association/individuals shall be collected by creating a corpus fund in the

KLCDA for an individual lake or for a group of lakes and the Authority itself shall take up development and rejuvenation of lakes.

b) MoU shall be entered into between corporate bodies and various Government departments as per the Model Memorandum of Understanding as in annexure.

c) Approval of the Department of Forest, Ecology and Environment shall be obtained to make changes to the MOU wherever necessary. The DFEE shall accord such approval in consultation with Law Department.

This order is issued with the approval of the State Cabinet in Agenda Item No. 9, Serial No. C:555/2016 of the meeting held on 23-11-2016.

By order and in the name of the Governor of Karnataka

RAMACHANDRA
Secretary to Government,
(Environment & Ecology)
Forest, Ecology and Environment Department.

ANNEXURE

MEMORANDUM OF UNDERSTANDING

(MOU No: __________)

The proposal for basic restoration, rejuvenation, development and maintenance of ______________ Lake situated at Survey No. ____ measuring ____ acres of _____________ Village, ______ Hobli, __________ Taluk, Bengaluru Urban District and bounded on:

East by :
West by :
North by:
South by:

This **Memorandum of Understanding** is made and executed **on ____ day of ______ 2016** at **Bengaluru**.

BY AND BETWEEN

1. The Department of Revenue, Bengaluru Urban District, Government of Karnataka having its office at Kandaya Bhavana, K.G. Road, Bengaluru-560001, who is having ownership over the above said Lake, herein after referred to as **"FIRST PARTY",** represented by **"The Deputy Commissioner", Bengaluru Urban District,**

2. Bangalore Development Authority (BDA)/Bruhat Bengaluru Mahanagara Palike (BBMP)/ Karnataka Forest Department/ Bengaluru Urban Zilla Panchayat, having its office at ______________, who is the Custodian Authority having control over the above said lake vide Government Order/Circular bearing No. _____ dated _______ with respect to its restoration, rejuvenation, development and maintenance, herein after referred to as "**SECOND PARTY"** represented by its **Commissioner/ Chief Executive Officer/ Deputy Conservator of Forests,**

3. Karnataka Lake Conservation and Development Authority (KLCDA), constituted by the Government of Karnataka having its office at ____________________, having jurisdiction over the above said lake and designated as Nodal Agency to take up restoration, rejuvenation, development and maintenance of lakes under corporate sector's CSR fund herein after referred to as "**THIRD PARTY**" represented by the Chief Executive Officer

AND

4. **________________________,** a Public Limited Company/ a Private Limited Company/ an Industry, incorporated under the Companies Act 1956, or Resident Welfare Association/ Group of Individuals registered under Societies Act, having its Registered Office at ____, Karnataka hereinafter referred to as the "**FOURTH PARTY"**, represented by its _______________**:**

   (Whereas the terms FIRST PARTY, SECOND PARTY, THIRD PARTY & FOURTH PARTY, wherever the context requires, shall also mean and include their successors in office, representatives, assignees, administrators, executors etc.)

Whereas, 'FIRST PARTY' is a government body that has ownership over the said lake and is empowered to give approval to take up the restoration, rejuvenation, development and maintenance of lakes.

Whereas, 'FOURTH PARTY' is a Public Limited Company/ a Private Limited Company/ an Industry, incorporated under the Companies Act 1956, or Resident Welfare Association/ Group of Individuals registered under Societies Act, intending to contribute to society as part of its Corporate Social Responsibility scheme or as philanthropic act on such terms and conditions as may be agreed upon between FOURTH PARTY and FIRST, SECOND & THIRD PARTY at the time of execution of this **"MOU"** for the purpose of basic restoration, rejuvenation, development and maintenance of ______________ Lake situated at Survey No. ____ measuring ____ acres of _____________ Village, ______ Hobli, __________ Taluk, Bengaluru Urban District.

Whereas, the parties herein have negotiated the terms and accordingly, the parties have entered into this Memorandum of Understanding (MOU) defining their respective roles and responsibilities:-

NOW THEREFORE, THIS MEMORANDUM OF UNDERSTANDING WITNESSETH AS FOLLOWS:-

1. **OBJECTIVE: -**
   For basic restoration, rejuvenation, development and maintenance of ______________ Lake situated at Survey No. ____ measuring ____ acres of _____________ Village, ______ Hobli, __________ Taluk, Bengaluru Urban District.

2. **ROLE OF 'FIRST PARTY'**

   a) To give necessary permissions/clearances to take up developmental works in the lake as per Detailed Project Report (DPR), being owner of the lake.

   b) To remove encroachments within the lake, if any.
   c) <u>To resolve legal issues, if any, arising out of this agreement.</u>

3. **ROLE OF 'SECOND PARTY'**

   a) To provide all necessary assistance to prepare DPR/Concept note and to get technical sanction for the DPR from the KLCDA in consultation with the fourth party.

   b) To ensure that the periphery fencing, footpath, structures and other civil works are maintained and repaired as necessary.

   c) Supply water at its own cost for the toilets, security cabin and for watering plants.

   d) Supply electricity at its own cost to the toilets, security cabin, general lighting etc. including all required sanctions and NOCs from the authorities concerned.

   e) Nominate officer/s as the nodal contact person/s to interact with 'FOURTH PARTY'. The nodal contact persons appointed are:

Name	Designation	Mobile No.

f) To appoint Project Management Consultant and expenses for the same to be borne by the FOURTH PARTY as per the DPR.

g) To engage with local population and other Government agencies on the importance of the lake restoration to reduce the existing pollution levels.

h) To engage with the local communities and residents on the importance of lake in their neighbourhood to ensure sustainable management of the lake even after the project completion.

i) To work with **Lake Wardens, Media and other agencies** to create public support and to generate public participation in ongoing activities related to Conservation of Environment at the lake, aimed at fostering a better understanding of the significance of lakes and the importance of protecting and preserving lakes.

j) To arrange corporate or student volunteer events at the Lake to increase community involvement in Environment Conservation.

k) The 'SECOND PARTY' shall involve Residents' Welfare Associations (RWAs) in the vicinity of the lake and shall be open to collaborating with NGOs active in environment preservation in the development and maintenance activity if they show willingness.

4. ROLE OF 'THIRD PARTY'

a) Karnataka Lake Conservation and Development Authority shall act as co-ordinating agency between SECOND AND FOURTH PARTY.

b) The Detailed Project Report submitted by SECOND AND FOURTH PARTY would be scrutinized by a Technical Committee constituted by KLCDA and would be approved by KLCDA.

5. ROLE OF 'FOURTH PARTY'

Implement development works as per the DPR submitted to the Second Party of and as approved by Karnataka Lake Conservation and Development Authority vide Letter dated __________ No. __________________. Both DPR and approval letter by Karnataka Lake Conservation and Development Authority are enclosed as Annexure to this MOU.

a) Report to the FIRST, SECOND and THIRD PARTIES if there is any attempt to encroach on lake area by any other parties.

b) Use best efforts to prevent debris and garbage from being dumped in the lake area and report any violation to 'SECOND and THIRD PARTY'.

c) Enforce rules and regulations laid down in consultation with 'SECOND PARTY' to maintain and preserve the lake area.

d) Take responsibility to provide financial support up to Rs._________ Lakhs for the restoration of the lake as outlined in the DPR submitted to the 'SECOND PARTY' and approved by the "THIRD PARTY".

l) Nominate nodal contact person/s to interact with 'SECOND PARTY'. The nodal contact persons appointed are:

Name	Designation	Mobile No.

5. MONITORING COMMITTEE

a) Monitoring committee consisting of 2 members of the SECOND PARTY, 1 Member of THIRD PARTY and 2 members of FOURTH PARTY will be put in place and will meet regularly to oversee that each party discharges its roles and responsibility as envisaged in this MOU.

b) For meetings, quorum is not established unless there is one member each from SECOND PARTY AND FOURTH PARTY.

c) Decisions on use of the lake premises for taking up an activity related to Conservation of Environment as envisaged in the DPR will have to be concurred to by Second and Third Parties.

6. POLICY GOVERNING PUBLIC COMMUNICATIONS AND PR

All public communication be it PR, promotional activities or press releases related to Conservation of Environment shall give equal **prominence** to all the parties, clearly mentioning the SECOND PARTY as the government stakeholder and FOURTH PARTY as the financial contributor for the development of lake restoration which will be implemented by SECOND PARTY.

7. IMPLEMENTATION SCHEDULE

That all the parties herein shall always strive towards implementation of the activities within the stipulated time as envisaged in the DPR by promptly performing their duties and carrying out their respective roles.

8. RIGHTS AND OBLIGATIONS OF PARTIES

a) This MOU shall by no means be interpreted as giving any lease rights or property title to ‘FOURTH PARTY’. The Lake and the area bounded by the fence was, is and shall continue to remain the property of ‘FIRST PARTY’.

b) ‘FOURTH PARTY’ shall not charge the public any entry fee and will not engage in any sort of commercial or income generating activities or put up any permanent structures unless otherwise mandated by the SECOND or THIRD PARTY or related government organization and approved by the THIRD PARTY IN WRITING.

c) ‘FOURTH PARTY’ shall not carry out or permit selling of water from the lake.

d) ‘FOURTH PARTY’ shall not make alterations to any structure or build any new structure or damage any ‘FIRST PARTY’ property within the lake area except for the scope of work mentioned in DPR (Detailed project Report approved by KLCDA) and after getting consent from THIRD PARTY IN WRITING.

e) ‘SECOND PARTY’ shall have no legal liability in case of any accident to any person/s or property resulting in injury or death for any reasons in and surrounding the lake during construction phase which is carried out by _______.

f) ‘FOURTH PARTY’ shall have the right to display signboards whose number, size and design shall be approved by the THIRD PARTY IN WRITING signifying that the lake is being restored with their financial contribution in the interest of the public.

g) ‘FOURTH PARTY’ shall not conduct any religious, entertainment or any other type of activities without prior permission of SECOND PARTY IN WRITING in the lake premises during or after the construction phase.

h) ‘FOURTH PARTY’ shall not utilize any area in any manner for furthering commercial interest of their corporate. Further, for development of lake, approvals for all plans from competent authorities including urban level bodies shall be obtained before taking up major development works.

9. TERM AND TERMINATION

a) This MOU is valid for a period of 24 months from the date of all parties sign it and may be renewed or extended for a further period on the same terms and conditions provided all the parties agree.

b) This MOU shall stand terminated on the expiry of the term if not extended as above.

c) If the SECOND PARTY observes that the FOURTH PARTY is not discharging their duties as mandated by the agreement (such party then becoming a Defaulting Party), then the SECOND PARTY shall bring the default up in the Monitoring Committee meeting, which shall put in place a plan for remedial action by the Defaulting Party. If no remedial action is taken by the Defaulting Party even after lapse of 60 days from the date of Monitoring Committee meeting, then ‘SECOND PARTY’ has the right to terminate the MOU with the Defaulting Party by giving one month’s prior notice.

d) In the event of termination by SECOND PARTY under clause 9 (c), the FOURTH PARTY shall remain obligated to continue providing financial assistance until the end of the termination notice period. For avoidance of doubt, FOURTH PARTY will be obligated to pay any dues/arrears for services provided by various vendors towards the maintenance of the lake as outlined in Section (2) during the said termination notice period. Termination notice under 9(c) & 9 (d) does not affect right of the FOURTH PARTY under Clause 8 (f) for the signboards till the date of termination of agreement.

10. FORCE MAJEURE

In case the performance of the respective obligations under this MOU is prevented by circumstances beyond the reasonable control of any of the parties herein such as but not limited to strike, fire, flood, action of elements, riots, sabotage or any other acts of God, then in that case, such failure in performance shall not be construed as or otherwise constitute as a default or violation of the terms of this MOU, by such party claiming Force Majeure, provided notice of such inability has been given to other parties within 30 days of the occurrence of such event. In the event of Force Majeure situation continuing beyond a period of three (3) months, all the parties shall mutually decide about the future course of action to remedy the situation, in order to fulfil the objectives of this MOU.

11. ADDRESS FOR THE PURPOSE OF COMMUNICATION

That the address for the purpose of communication by any of the parties herein shall be as per the preamble herein above unless otherwise notified by the party to others. Any notice by one party to others shall be deemed to be complete upon dispatch of the same by way of RPAD or email or other electronic form with due acknowledgement thereof.

12. ARBITRATION CLAUSE:

Any dispute or difference or claim arising out of, or in connection with, or relating to the present contract or the breach, termination or invalidity thereof shall be referred and settled under the Arbitration Centre - Karnataka (Domestic & International) Rules 2012, by one or more arbitrators appointed in accordance with its rules.

ANNEXURE (DPR and Consent Letter from Karnataka Lake Conservation and Development Authority)

In witness whereof, the parties above named have appended their respective signatures on the day, month and year first above written at Bengaluru:

For 'FIRST PARTY'
Name:
Designation:
Signature:

For 'SECOND PARTY'
Name:
Designation:
Signature:

For 'THIRD PARTY'
Name:
Designation:
Signature:

For 'FOURTH PARTY'
Name:
Designation:
Signature:

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 200

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I	ಬೆಂಗಳೂರು, ಸೋಮವಾರ, ಡಿಸೆಂಬರ್ ೫, ೨೦೧೬ (ಮಾರ್ಗಶಿರ ೧೪, ಶಕ ವರ್ಷ ೧೯೩೮)	ನಂ. ೧೩೩೧
Part–I	**Bengaluru, Monday, December 5, 2016 (Margashira 14, Shaka Varsha 1938)**	**No. 1331**

ಕರ್ನಾಟಕ ಸರ್ಕಾರದ ನಡವಳಿಗಳು

ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಸಚಿವಾಲಯ

ವಿಷಯ: "ಉಜ್ವಲ" ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳಿಗೆ ರಾಜ್ಯ ಘಟಕದಿಂದ ಎರಡು ಬರ್ನರ್‌ವುಳ್ಳ ಗ್ಯಾಸ್ ಸ್ಟವ್ ನೀಡುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂ: ಆನಾಸ 347 ಡಿಆರ್‌ಎ 2013 ದಿನಾಂಕ: 17.08.2016

2) ಕೇಂದ್ರ ಸರ್ಕಾರದ ಪತ್ರ ಸಂ: P-20019/114/2016-LPG ದಿನಾಂಕ: 25.11.2016

ಪ್ರಸ್ತಾವನೆ:

ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ರಾಜ್ಯ ಸರ್ಕಾರವು 'ಉಜ್ವಲ' ಯೋಜನೆಯ ಪ್ರತಿ ಫಲಾನುಭವಿಗೆ ರೂ.1000/– ಸಹಾಯಧನವನ್ನು 5 ಕೆ.ಜಿ. ಎಲ್.ಪಿ.ಜಿ. ಸಿಲಿಂಡರ್ ಖರೀದಿಗಾಗಿ ಠೇವಣಿ ಮೊತ್ತ ಹಾಗೂ ಅನಿಲ ತುಂಬಿದ ಮೊದಲ ಸಿಲಿಂಡರ್‌ನ ವೆಚ್ಚಕ್ಕಾಗಿ ನೀಡಲು (ಭದ್ರತಾ ಠೇವಣಿ ಇಡಬೇಕಾದ 14.2 ಕೆ.ಜಿ. ಸಾಮರ್ಥ್ಯದ ಸಿಲಿಂಡರ್‌ನ್ನು ತೆಗೆದುಕೊಳ್ಳುವ ಆಯ್ಕೆ ಇರುತ್ತದೆಯಾದರೂ ಪ್ರತಿ ಫಲಾನುಭವಿಗೆ ಸಹಾಯಧನದ ಮೊತ್ತವನ್ನು ರೂ.1000/–ಕ್ಕೆ ಸೀಮಿತಗೊಳಿಸಲಾಗುವುದು) ಅಥವಾ ಫಲಾನುಭವಿಯ ಆಯ್ಕೆಯಂತೆ ಎರಡು ಸೌರದೀಪಗಳ (ಗ್ರಾಮೀಣ ಪ್ರದೇಶಗಳಲ್ಲಿ ಮಾತ್ರ) ಖರೀದಿಗಾಗಿ ನೀಡಲು ಆದೇಶಿಸಿರುತ್ತದೆ.

ಉಜ್ವಲ ಫಲಾನುಭವಿಗಳಿಗೆ 5 ಕೆ.ಜಿ ಸಾಮರ್ಥ್ಯದ ಎಲ್.ಪಿ.ಜಿ. ಸಿಲಿಂಡರ್‌ಗಳನ್ನು ನೀಡುವ ರಾಜ್ಯ ಸರ್ಕಾರದ ಈ ಮೇಲಿನ ಪ್ರಸ್ತಾವನೆಗೆ ಕೇಂದ್ರ ಸರ್ಕಾರವು ಸಮ್ಮತಿಸಿರುವುದಿಲ್ಲ ಹಾಗೂ ಹೆಚ್ಚಿನ ಫಲಾನುಭವಿಗಳು ಸೋಲಾರ್ ದೀಪಗಳ ಬದಲಿಗೆ ಗ್ಯಾಸ್ ಸ್ಟವ್‌ಗಳನ್ನು ಪಡೆಯಲು ಇಚ್ಛಿಸಿರುತ್ತಾರೆ.

ಮೇಲೆ ಓದಲಾದ (2)ರ ಪತ್ರದಲ್ಲಿ ಕೇಂದ್ರದ "ಉಜ್ವಲ" ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳಿಗೆ ರಾಜ್ಯ ಘಟಕದಿಂದ ಎರಡು ಬರ್ನರ್‌ವುಳ್ಳ ಗ್ಯಾಸ್ ಸ್ಟವ್ ನೀಡುವ ಪ್ರಸ್ತಾವನೆಗೆ ಕೇಂದ್ರ ಸರ್ಕಾರವು ಸಹಮತಿ ನೀಡಿರುತ್ತದೆ.

ಅದರಂತೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂ: ಆನಾಸ 347 ಡಿಆರ್‌ಎ 2013, (ಭಾ) ಬೆಂಗಳೂರು, ದಿನಾಂಕ: 03.12.2016.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ದಿನಾಂಕ: 17.08.2016ರಂದು ಹೊರಡಿಸಿರುವ ಸರ್ಕಾರಿ ಆದೇಶವನ್ನು ಹಿಂಪಡೆಯುತ್ತಾ, ರಾಜ್ಯ ಸರ್ಕಾರವು ಕೇಂದ್ರದ "ಉಜ್ವಲ" ಯೋಜನೆಯ ಮಾರ್ಗಸೂಚಿಗಳನ್ವಯ ಆಯ್ಕೆಯಾಗುವ ಪ್ರತಿ ಫಲಾನುಭವಿಗಳಿಗೆ ರಾಜ್ಯ ಘಟಕದಿಂದ ಗರಿಷ್ಠ ರೂ: 1000/–ಗಳ ಸಹಾಯಧನದಲ್ಲಿ ಎರಡು ಬರ್ನರ್‌ವುಳ್ಳ ಗ್ಯಾಸ್ ಸ್ಟವ್ ನೀಡಲು ಆದೇಶಿಸಿದೆ ಹಾಗೂ ಇದರ ಮಾರ್ಗಸೂಚಿಯನ್ನು ಲಗತ್ತಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 968/ವೆಚ್ಚ–5/2016 ದಿನಾಂಕ:02.11.2016ರ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಅರ್ಚನ ಎಂ.ಎಸ್
ಸರ್ಕಾರದ ಅಧೀನ ಕಾರ್ಯದರ್ಶಿ,
ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳ
ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ.

ಪ್ರಧಾನ ಮಂತ್ರಿ ಉಜ್ವಲ ಯೋಜನೆ(PMUY)ಯಲ್ಲಿ ರಾಜ್ಯದ ಪಾಲ್ಗೊಳ್ಳುವಿಕೆ

ಅನುಷ್ಠಾನ ಮಾರ್ಗಸೂಚಿಗಳು

1. **ಯೋಜನೆ:**

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಮಂತ್ರಾಲಯವು ಪ್ರಧಾನ ಮಂತ್ರಿ ಉಜ್ವಲ ಯೋಜನೆಗೆ ಸಂಬಂಧಿಸಿದಂತೆ ಹೊರಡಿಸಿರುವ ಮಾರ್ಗಸೂಚಿಗಳ ಸೆಕ್ಷನ್ 6 ರಂತೆ (ಅನುಬಂಧ–1) ಈ ಯೋಜನೆಯಲ್ಲಿ ರಾಜ್ಯ ಸರ್ಕಾರವು ಪಾಲ್ಗೊಳ್ಳುತ್ತಿದ್ದು, ರಾಜ್ಯದ ಉಜ್ವಲ ಫಲಾನುಭವಿಗಳಿಗೆ ಪ್ರಮಾಣಿತ ಗುಣಮಟ್ಟದ (ಅನುಬಂಧ–2) ಎರಡು ಬರ್ನರ್‌ಗಳ ಗ್ಯಾಸ್ ಸ್ಟವ್‌ನ ಮೊತ್ತವನ್ನು ಸಹಾಯಧನವಾಗಿ ನೀಡುತ್ತದೆ.

2. **ರಾಜ್ಯದ ಪಾಲ್ಗೊಳ್ಳುವಿಕೆಯ ವಿಧಾನ:**

ರಾಜ್ಯದ ಉಜ್ವಲ ಯೋಜನೆಯ ಫಲಾನುಭವಿಗಳು ಅನಿಲ ತುಂಬಿದ ಮೊದಲ ಸಿಲಿಂಡರ್‌ನ (first refill cylinder) ವೆಚ್ಚವನ್ನು ಮಾತ್ರ ಭರಿಸಬೇಕಾಗಿರುತ್ತದೆ. ಈ ಯೋಜನೆಯಡಿ ನೀಡಲಾಗುವ ಅನಿಲ ಸಂಪರ್ಕಗಳಿಗೆ ಎರಡು ಬರ್ನರ್‌ಗಳ ಗ್ಯಾಸ್ ಸ್ಟವ್‌ಗಳನ್ನು ರಾಜ್ಯವು ನೀಡಲಿದ್ದು ಇದಕ್ಕೆ ತಗಲುವ (ರೂ.990 ಪ್ರತಿ ಸ್ಟವ್‌ಗೆ) ಮೊತ್ತವನ್ನು ರಾಜ್ಯ ಸರ್ಕಾರವು ತೈಲ ಮಾರುಕಟ್ಟೆ ಕಂಪನಿ (OMC)ಗಳಿಗೆ ಪಾವತಿಸುತ್ತದೆ.

3. **ಅರ್ಹತೆ:**

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಮಂತ್ರಾಲಯವು ನಗರ ಮತ್ತು ಗ್ರಾಮೀಣ ಪ್ರದೇಶಗಳಿಗೆ ನಿರ್ದರಿಸಿರುವ ಸಂಬಂಧಿಸಿದ ವಂಚಿತ ಮಾನದಂಡಗಳಿಗೆ ಅನುಗುಣವಾಗಿ ಕರ್ನಾಟಕ ರಾಜ್ಯದ ಸಾಮಾಜಿಕ ಆರ್ಥಿಕ ಜಾತಿ ಗಣತಿ 2011ರ ದತ್ತಾಂಶವನ್ನು NIC ಮೂಲಕ ಶೋಧಿಸಿ (filtered) ಪಟ್ಟಿ ಮಾಡಿರುತ್ತದೆ. ಈ ಪಟ್ಟಿಯಲ್ಲಿ ಸೇರಿರುವ ಮತ್ತು ಈ ಯೋಜನೆಯ ಆರಂಭದಲ್ಲಿ ಅಡುಗೆ ಅನಿಲ ಸಂಪರ್ಕವನ್ನು ಹೊಂದಿಲ್ಲದೆ ಇರುವ ಕುಟುಂಬಗಳು ಉಜ್ವಲ ಯೋಜನೆಯಡಿ ಅನಿಲ ಸಂಪರ್ಕ ಪಡೆಯಲು ಅರ್ಹರಿರುತ್ತಾರೆ. ರಾಜ್ಯದ ಇಂತಹ ಫಲಾನುಭವಿಗಳು ಕಂಡಿಕೆ 2ರಲ್ಲಿ ತಿಳಿಸಿರುವಂತೆ ಎರಡು ಬರ್ನರ್ ಗ್ಯಾಸ್ ಸ್ಟವ್‌ಗಳನ್ನು ಕೂಡ ಪಡೆಯಲು ಅರ್ಹರಾಗಿರುತ್ತಾರೆ. ಅನಿಲ ಸಂಪರ್ಕವನ್ನು ಕುಟುಂಬದ ವಯಸ್ಕ ಮಹಿಳೆಯ ಹೆಸರಿನಲ್ಲಿ ಮಾತ್ರ ನೀಡಲಾಗುವುದು. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಕುಟುಂಬಗಳ ಮತ್ತು ದುರ್ಬಲ ವರ್ಗದ ಮಹಿಳೆಯರಿಗೆ ಹಾಗೂ ಎಲ್.ಪಿ.ಜಿ ಸಂಪರ್ಕ ಕಡಿಮೆ ಇರುವ ಜಿಲ್ಲೆಗಳಿಗೆ ಆದ್ಯತೆ ನೀಡಲಾಗುವುದು.

4. **ಹಣ ಕಾಸು**

ಹಣ ಕಾಸಿನ ಮೂಲ

ಪ್ರಧಾನ ಮಂತ್ರಿ ಉಜ್ವಲ ಯೋಜನೆಯಡಿ ರಾಜ್ಯ ಘಟಕದ ವೆಚ್ಚವನ್ನು ಸೀಮೆಎಣ್ಣೆ ನೇರ ಸೌಲಭ್ಯ ವರ್ಗಾವಣೆಯಡಿ(DBTK) ರಾಜ್ಯವು ಐಚಿಕವಾಗಿ ಪಡಿತರ ಸೀಮೆಎಣ್ಣೆಯನ್ನು ಕಡಿತಗೊಳಿಸಿ ಕೇಂದ್ರ ಸರ್ಕಾರದಿಂದ ಪಡೆದಿರುವ ಪ್ರೋತ್ಸಾಹ ಧನದ ಮೊತ್ತದಿಂದ ಭರಿಸಲಾಗುವುದು.

5. **ಅನುಷ್ಠಾನ ವಿಧಾನ**

5.1 ರಾಜ್ಯ ಮಟ್ಟದ ಉನ್ನತಾಧಿಕಾರ ಸಮಿತಿಯ ರಚನೆ

ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಉನ್ನತಾಧಿಕಾರ ಸಮಿತಿಯು ಪ್ರಧಾನ ಮಂತ್ರಿ ಉಜ್ವಲ ಯೋಜನೆಯ ರಾಜ್ಯ ಘಟಕದ ಬಗ್ಗೆ ನೀತಿ ನಿರ್ಧಾರಗಳನ್ನು ಕೈಗೊಳ್ಳುತ್ತದೆ ಹಾಗೂ ರಾಜ್ಯದಲ್ಲಿ ಇದರ ಒಟ್ಟಾರೆ ಅನುಷ್ಠಾನವನ್ನು ಪರಿಶೀಲಿಸುತ್ತದೆ.

5.2 ಜಿಲ್ಲಾ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿಯ ರಚನೆ

ಜಿಲ್ಲೆಯ ಉಸ್ತುವಾರಿ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಚುನಾಯಿತ ಪ್ರತಿನಿದಿಗಳು, ಅಧಿಕಾರಿಗಳು ಮತ್ತು ನಾಮ ನಿರ್ದೇಶಿತ ವ್ಯಕ್ತಿಗಳನ್ನು ಒಳಗೊಂಡಿರುವ ಜಿಲ್ಲಾಮಟ್ಟದ ಸಮಿತಿಯು ಜಿಲ್ಲೆಯಲ್ಲಿ ಉಜ್ವಲ ಯೋಜನೆಯ ಅನುಷ್ಠಾನವನ್ನು ಕನಿಷ್ಠ ಪ್ರತಿ ಮೂರು ತಿಂಗಳಿಗೊಮ್ಮೆ ಪರಿಶೀಲಿಸುತ್ತದೆ.

5.3 **ಜಿಲ್ಲಾ ಮಟ್ಟದ ಯೋಜನೆ ಮತ್ತು ಅನುಷ್ಠಾನ ಸಮಿತಿಯ ರಚನೆ**

ಜಿಲ್ಲೆಯಲ್ಲಿ ಉಜ್ವಲ ಯೋಜನೆಯ ಅನುಷ್ಠಾನಕ್ಕಾಗಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಮಿತಿಯನ್ನು ಈ ಕೆಳಗಿನಂತೆ ರಚಿಸಲಾಗುತ್ತದೆ.

a) ಜಿಲ್ಲಾಧಿಕಾರಿಗಳು– ಅಧ್ಯಕ್ಷತೆ

b) ಜಿಲ್ಲಾಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣ ಅಧಿಕಾರಿಗಳು

c) ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಆಯುಕ್ತರು/ ಮುಖ್ಯ ಅಧಿಕಾರಿಗಳು

d) ಜಿಲ್ಲಾ ಸಾರ್ವಜನಿಕ ಸಂಪರ್ಕ ಅಧಿಕಾರಿಗಳು

e) ತೈಲ ಮಾರುಕಟ್ಟೆ ಕಂಪನಿಗಳಿಂದ ಉಜ್ವಲ ಯೋಜನೆಗೆ ನೇಮಕಗೊಂಡಿರುವ ನೋಡಲ್ ಅಧಿಕಾರಿ

f) ಜಿಲ್ಲೆಯಲ್ಲಿರುವ ಅಥವಾ ಜಿಲ್ಲೆಯಲ್ಲಿ ಸೇವಾ ವ್ಯಾಪ್ತಿಯನ್ನು ಹೊಂದಿರುವ ಎಲ್ಲಾ ಎಲ್.ಪಿ.ಜಿ. ವಿತರಕರು

g) ಜಿಲ್ಲಾಧಿಕಾರಿಗಳಿಂದ ನಾಮನಿರ್ದೇಶಿತಗೊಳ್ಳುವ ಇತರೆ ಯಾವುದೇ ಅಧಿಕಾರಿಗಳು

h) ಉಪ ನಿರ್ದೇಶಕರು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ – ಸದಸ್ಯ ಕಾರ್ಯದರ್ಶಿ

i) ಸಮಿತಿಯು ಕನಿಷ್ಟ ತಿಂಗಳಿಗೊಮ್ಮೆ ಸಭೆಯನ್ನು ನಡೆಸುತ್ತದೆ.

5.4 ಅರ್ಹ ಫಲಾನುಭವಿಗಳ ಪಟ್ಟಿ ತಯಾರಿಕೆ

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಮಂತ್ರಾಲಯವು ನಿರ್ದರಿಸಿರುವ ಸಂಬಂಧಿಸಿದ ವಂಚಿತ ಮಾನದಂಡಗಳಿಗೆ ಅನುಗುಣವಾಗಿ ಶೋಧಿಸಿ (filtered) ತೈಲ ಮಾರುಕಟ್ಟೆ ಕಂಪನಿಗಳಿಗೆ ನೀಡಿರುವ ಸಾಮಾಜಿಕ ಆರ್ಥಿಕ ಜಾತಿ ಗಣತಿ 2011ರ ಪಟ್ಟಿಯನ್ನು ರಾಜ್ಯ ಘಟಕದ ಸಹಾಯಧನ ವರ್ಗಾವಣೆ ಮಾಡಲು ಉಪಯೋಗಿಸಿಕೊಳ್ಳಲಾಗುವುದು. ಈ ಪಟ್ಟಿಯನ್ನು ಆಹಾರ ಇಲಾಖೆ ಅಧಿಕಾರಿಗಳು/ನಿರೀಕ್ಷಕರ ಮಾಡ್ಯುಲ್‌ನಲ್ಲಿ ಒದಗಿಸಲಾಗುವುದು ಹಾಗೂ ಇದರ ಮುದ್ರಿತ ಪಟ್ಟಿಗಳನ್ನು ಎಲ್ಲಾ ನ್ಯಾಯಬೆಲೆ ಅಂಗಡಿಗಳಲ್ಲಿ ಹಾಗು ಸ್ಥಳೀಯ ಸಂಸ್ಥೆಗಳಲ್ಲಿ ಲಭ್ಯಪಡಿಸಲಾಗುವುದು. ಅಲ್ಲದೆ ಈ ಪಟ್ಟಿಯು ತೈಲ ಮಾರುಕಟ್ಟೆ ಕಂಪನಿಗಳಿಂದ ನೇಮಕಗೊಂಡಿರುವ ಉಜ್ವಲ ಯೋಜನೆಯ ಜಿಲ್ಲಾಮಟ್ಟದ ನೋಡಲ್ ಅಧಿಕಾರಿಗಳ ಬಳಿ ಲಭ್ಯವಿರುತ್ತದೆ.

5.5 **ಅರ್ಜಿ ನಮೂನೆಗಳ ಲಭ್ಯತೆ**

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಮಂತ್ರಾಲಯ ವಿನ್ಯಸಗೊಳಿಸಿರುವ ಉಜ್ವಲ ಯೋಜನೆಯ ಪ್ರಮಾಣಿತ ಅರ್ಜಿ ನಮೂನೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸ್ಥಳೀಯ ಸಂಸ್ಥೆಗಳು, ನ್ಯಾಯಬೆಲೆ ಅಂಗಡಿಗಳು ಮತ್ತು ಎಲ್.ಪಿ.ಜಿ. ವಿತರಕರ ಬಳಿ ಲಭ್ಯಗೊಳಿಸಲಾಗುವುದು. ಇದರೊಂದಿಗೆ ರಾಜ್ಯದ ಸಹಾಯ ಧನ ಪಡೆಯಲು Part-B ನಮೂನೆಯು ಲಭ್ಯವಿದ್ದು ಅರ್ಜಿದಾರರು ಈ ಎರಡು ನಮೂನೆಗಳನ್ನು ಏಕ ಕಾಲಕ್ಕೆ ಭರ್ತಿಮಾಡಿ ಸಲ್ಲಿಸಬೇಕಾಗುತ್ತದೆ.

5.6 **ಅರ್ಜಿ ನಮೂನೆಗಳ ಪ್ರಾಯೋಜಕತೆ**

ಎಲ್ಲಾ ಅರ್ಹ ಫಲಾನುಭವಿಗಳು ಸರಿಯಾದ ರೀತಿಯಲ್ಲಿ ನಿರ್ದಿಷ್ಟಪಡಿಸಿದ ಅರ್ಜಿ ನಮೂನೆಗಳನ್ನು ಭರ್ತಿ ಮಾಡಿರುವ ಬಗ್ಗೆ ಜಿಲ್ಲಾಧಿಕಾರಿಗಳು ಖಾತರಿಪಡಿಸಿಕೊಳ್ಳುವುದು. ಇದಕ್ಕಾಗಿ ಜಿಲ್ಲಾಧಿಕಾರಿಗಳು ಅರ್ಹ ಫಲಾನುಭವಿಗಳಿಗೆ ಆಧಾರ್ ನೋಂದಣಿ, ಬ್ಯಾಂಕ್ ಖಾತೆಗಳ ತೆರೆಯುವಿಕೆ ಮತ್ತು ಆಧಾರ್ ಸಂಖ್ಯೆ ಮತ್ತು ಮೊಬೈಲ್ ಸಂಖ್ಯೆಗಳನ್ನು ಬ್ಯಾಂಕ್ ಖಾತೆಯೊಂದಿಗೆ ಜೋಡಿಸಲು ಅಗತ್ಯ ಸಹಾಯ ಒದಗಿಸುವಿಕೆಯನ್ನು ಖಾತರಿ ಪಡಿಸತಕ್ಕದ್ದು.

5.7 **ಅರ್ಜಿ ನಮೂನೆಗಳ ಜಮಾವಣೆ**

ರಾಜ್ಯ ಘಟಕದ Part-B ನಮೂನೆಯೊಂದಿಗೆ ಭರ್ತಿ ಮಾಡಿದ ಫಲಾನುಭವಿಗಳ ಅರ್ಜಿಗಳನ್ನು ಎಲ್.ಪಿ.ಜಿ. ವಿತರಕರಿಗೆ ಜಮಾವಣೆ ಮಾಡಲಾಗುವುದು. ವಿತರಕರು ಈ ಅರ್ಜಿಗಳನ್ನು ಅಗತ್ಯ ಮಾಹಿತಿಗಳೊಂದಿಗೆ ತೈಲ ಮಾರುಕಟ್ಟೆ ಕಂಪನಿಗಳು ನಕಲೀಕರಣ(de duplication)ವನ್ನು ಗುರುತಿಸಲು ಮೀಸಲಿಟ್ಟಿರುವ ಪೋರ್ಟ್‌ಲ್‌ನಲ್ಲಿ ಅಳವಡಿಸುವುದು.

5.8 ಅರ್ಜಿಗಳ ನಕಲೀಕರಣ ಮತ್ತು ಅನುಮೋದನೆ

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಮಂತ್ರಾಲಯವು NIC ಕೇಂದ್ರ ಸ್ಥಾನದ ಮೂಲಕ ಅರ್ಜಿಗಳನ್ನು ಕೇಂದ್ರಿಯವಾಗಿ ಪರಿಶೀಲಿಸಿ ನಕಲೀಕರಣಗೊಂಡಿರುವ ಅರ್ಜಿಗಳನ್ನು ಹೊರತುಪಡಿಸಿ, ತಾವಾಗಲಿ ಅಥವಾ ತಮ್ಮ ಕುಟುಂಬದಲ್ಲಾಗಲಿ ಎಲ್.ಪಿ.ಜಿ ಸಂಪರ್ಕವನ್ನು ಹೊಂದದೆ ಇರುವ ಅನುಮೋದಿತ ಫಲಾನುಭವಗಳ ಪಟ್ಟಿಯನ್ನು ಸೃಜಿಸುತ್ತದೆ.

5.9 **ಅನಿಲ ಸಂಪರ್ಕಗಳ ಬಿಡುಗಡೆ**

ಮೇಲೆ ತಿಳಿಸಿದಂತೆ ಅನುಮೋದನೆಗೊಂಡಿರುವ ಫಲಾನುಭವಿಗಳಿಗೆ ಎಲ್.ಪಿ.ಜಿ. ವಿತರಕರು ಅನಿಲ ಸಂಪರ್ಕವನ್ನು ಬಿಡುಗಡೆ ಮಾಡಿ ಫಲಾನುಭವಿಗಳ ಹೆಸರಿನಲ್ಲಿ subscription voucher ಗಳನ್ನು ನೀಡುವರು. ಫಲಾನುಭವಿಗಳ ವಿವರಗಳನ್ನು ರಾಜ್ಯದ NIC ಯು ಅಭಿವೃದ್ಧಿಪಡಿಸಿರುವ ವೆಬ್ ಸರ್ವಿಸ್ ಮೂಲಕ ತೈಲ ಮಾರುಕಟ್ಟೆ ಕಂಪನಿಗಳು ರಾಜ್ಯದ ಆಹಾರ ಇಲಾಖೆಯ ಸರ್ವರ್‌ಗೆ ಪ್ರತಿ ದಿನ ಕಳುಹಿಸುವುದು. ಈ ಪಟ್ಟಿಯನ್ನು ಆಹಾರ ಅಧಿಕಾರಿ / ನಿರೀಕ್ಷಕರ ಮಾಡ್ಯುಲ್‌ನಲ್ಲಿಯೂ ಹಾಗೂ ಜಿಲ್ಲಾಧಿಕಾರಿಗಳ ಪರಿಶೀಲನೆಗೂ ಲಭ್ಯಗೊಳಿಸಲಾಗುವುದು.

5.10 ಅನಿಲ ಸಂಪರ್ಕಗಳ ವಿತರಣೆಗಾಗಿ "ಮೇಳ" ಗಳು

ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ವಿವಿಧ ಸ್ಥಳಗಳಲ್ಲಿ ಮೇಳಗಳನ್ನು ಸಂಘಟಿಸುವ ಮೂಲಕ ಫಲಾನುಭವಿಗಳಿಗೆ ಅನಿಲ ಸಂಪರ್ಕಗಳನ್ನು ಬಿಡುಗಡೆಗೊಳಿಸಲಾಗುವುದು. ಸದರಿ ಮೇಳಗಳನ್ನು ಆ ಪ್ರದೇಶದ ಸಾರ್ವಜನಿಕ ಪ್ರತಿನಿಧಿಗಳ ಮತ್ತು ಪ್ರಮುಖ ವ್ಯಕ್ತಿಗಳ ಉಪಸ್ಥಿತಿಯಲ್ಲಿ ನಡೆಸಲಾಗುವುದು. ಈ ಕಾರ್ಯಕ್ರಮವನ್ನು ಪ್ರಧಾನಮಂತ್ರಿ ಉಜ್ವಲ ಯೋಜನೆಯ ಮಹತ್ವ ಹಾಗೂ ಸುರಕ್ಷತಾ ಕ್ರಮಗಳನ್ನು ಒಳಗೊಂಡ ಕಿರುಚಿತ್ರಗಳನ್ನು ಪ್ರದರ್ಶಿಸುವ ಮೂಲಕ ಪ್ರಾರಂಭಿಸಬಹುದಾಗಿದೆ. ಫಲಾನುಭವಿಗಳಿಗೆ ಒಂದು ಫೋಲ್ಡರ್ ಕಿಟ್ ಅನ್ನು ಒದಗಿಸಲಾಗುವುದು, ಅದರಲ್ಲಿ ಮುಖ್ಯಮಂತ್ರಿಯವರ ಸಂದೇಶ, Subscription Voucher, ಡಿ.ಜಿ.ಸಿ.ಸಿ ಕೈಪಿಡಿ, ಲ್ಯಾಮಿನೇಟ್ ಮಾಡಿರುವ ಸುರಕ್ಷತಾ ಸೂಚನೆಗಳ ಚೀಟಿ ಮತ್ತು ವಿಮಾ ಪತ್ರಗಳಿರುತ್ತವೆ. ಒಬ್ಬ ಪರಿಣಿತ ತೈಲ ಮಾರುಕಟ್ಟೆ ಕಂಪನಿಯ ಅಧಿಕಾರಿ / ವಿತರಕರು ಎಲ್.ಪಿ.ಜಿ. ಯನ್ನು ಸುರಕ್ಷಿತವಾಗಿ ಉಪಯೋಗಿಸುವ ಬಗ್ಗೆ ನೇರ ಪ್ರಾತ್ಯಕ್ಷಿಕೆ ನೀಡತಕ್ಕದ್ದು. ಮೇಳಗಳಲ್ಲಿ ಮಹಿಳಾ ಫಲಾನುಭವಿಗಳಿಗಾಗಿ "ಸೇಫ್ಟಿ ಕ್ಲೀನಿಕ್" ಅನ್ನು ಕೂಡ ಆಯೋಜಿಸಬಹುದಾಗಿದೆ.

5.11 ಅನಿಲ ಸಂಪರ್ಕಗಳ ಅಳವಡಿಕೆ

ಸಾಧ್ಯವಾದಷ್ಟು ಮೇಳಗಳು ಮುಗಿದ ಕೂಡಲೇ ಅಥವಾ ಫಲಾನುಭವಿಗಳಿಗೆ ಎಲ್.ಪಿ.ಜಿ. ಸಂಪರ್ಕವು ಬಿಡುಗಡೆಯಾದ 10 ದಿನಗಳೊಳಗಾಗಿ ಫಲಾನುಭವಿಯ ಸ್ಥಳ / ಮನೆಗೆ ಸಿಲಿಂಡರ್, ಸ್ಟವ್ ಮತ್ತು ಪಿ.ಆರ್. ಸಾಧನಗಳನ್ನು ಅಳವಡಿಸತಕ್ಕದ್ದು,

5.12 ಗ್ಯಾಸ್ ಸ್ಟವ್ ಮತ್ತು ಮೊದಲ ರೀಫಿಲ್ ಸಿಲಿಂಡರ್‌ನ ವೆಚ್ಚವನ್ನು ಮರು ಪಾವತಿಸಿಕೊಳ್ಳಲು ವಿತರಕರು ಕ್ಲೇಮು ಸಲ್ಲಿಸುವ ಬಗ್ಗೆ.

ಎಲ್.ಪಿ.ಜಿ. ವಿತರಕರು ಫಲಾನುಭವಿಗಳ ಮನಗೆ ಅನಿಲ ಸಂಪರ್ಕಗಳನ್ನು ಅಳವಡಿಸಿದ ನಂತರ ರಾಜ್ಯ ಸರ್ಕಾರದ ಸಹಾಯಧನವನ್ನು ಪಡೆಯಲು ತೈಲ ಮಾರುಕಟ್ಟೆ ಕಂಪನಿಗಳ ಮೂಲಕ ಕ್ಲೇಮುಗಳನ್ನು ಸಲ್ಲಿಸುವುದು. ಸದರಿ ಕ್ಲೇಮುಗಳ ನಿರ್ವಹಣೆಗಾಗಿ/ಸಂಸ್ಕರಣೆಗಾಗಿ ಹಾಗೂ ಆಯುಕ್ತರು (ಆಹಾರ) ರವರ

ರಾಜ್ಯ ಮಟ್ಟದ ಖಾತೆಯಿಂದ ಕೇಂದ್ರೀಯವಾಗಿ ರಾಜ್ಯ ಸಹಾಯಧನ ಬಿಡುಗಡೆ ಮಾಡಲು ಅನುಕೂಲವಾಗುವಂತೆ ರಾಜ್ಯದ ಎನ್.ಐ.ಸಿ. ತಂಡವು ವೆಬ್‌ಸೇವೆಯನ್ನು ಅಭಿವೃದ್ಧಿಪಡಿಸತಕ್ಕದ್ದು. ರಾಜ್ಯ ಸಹಾಯಧನವನ್ನು ಭಾರತೀಯ ತೈಲ ನಿಗಮದ ಮೂಲಕ ಎಲ್ಲಾ ಮೂರು ತೈಲ ಮಾರಾಟ ಕಂಪನಿಗಳಿಗೆ ಬಿಡುಗಡೆ ಮಾಡಲಾಗುವುದು. ಹಾಗೂ ತೈಲ ಮಾರಾಟ ಕಂಪನಿಗಳ ಮೂಲಕ ಸಹಾಯಧನವನ್ನು ವಿತರಕರಿಗೆ ಪಾವತಿಸಲಾಗುವುದು.

5.13 ರಾಜ್ಯ ಸಹಾಯಧನದ ಬಿಡುಗಡೆ

ತೈಲ ಮಾರಾಟ ಕಂಪನಿಗಳು ತಮ್ಮ ಕ್ಲೇಮುಗಳನ್ನು ಸೃಜಿಸಲು ಅನುವಾಗುವಂತೆ ಕ್ಲೇಮುಗಳ ಸಂಸ್ಕರಣೆಗಾಗಿ ಎನ್.ಐ.ಸಿ.ಯು ವೆಬ್ ಆಧಾರಿತ ತಂತ್ರಾಂಶವನ್ನು ಅಭಿವೃದ್ಧಿ ಪಡಿಸತಕ್ಕದ್ದು. ಸದರಿ ಕ್ಲೇಮುಗಳನ್ನು ಆಯುಕ್ತರು (ಆಹಾರ) ರವರು ಸಂಸ್ಕರಿಸಿ ಎರಡು ವ್ಯವಹಾರಿಕಾ ದಿನಗಳ ಒಳಗಾಗಿ ಪಾವತಿಯಾಗುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

5.14 ಬಳಕೆ ಪ್ರಮಾಣ ಪತ್ರಗಳ ವಿತರಣೆ

(i) ಇಲಾಖೆಯು ಅಭಿವೃದ್ಧಿಪಡಿಸಿದ ತಂತ್ರಾಂಶವು ಅನಿಲ ಸಂಪರ್ಕ ಬಿಡುಗಡೆಗೊಂಡಿರುವ ಪ್ರತಿ ಫಲಾನುಭವಿಯ ಎಲ್ಲಾ ವಿವರಗಳನ್ನು ಒಳಗೊಂಡಿರುತ್ತದೆ. ಈ ಮಾಹಿತಿಯ ಆಧಾರದ ಮೇಲೆ ಗಣಕಯಂತ್ರದ ಮೂಲಕ ಪ್ರತಿ ಜಿಲ್ಲೆಗೂ ಬಳಕೆ ಪ್ರಮಾಣ ಪತ್ರವನ್ನು ಸೃಜಿಸಬಹುದಾಗಿರುತ್ತದೆ.

(ii) ಬಳಕೆ ಪ್ರಮಾಣ ಪತ್ರಗಳನ್ನು ಸ್ವೀಕರಿಸಿದ ಕೂಡಲೇ, ಯೋಜನೆಯಂತೆ ಹಣವು ಸರಿಯಾದ ರೀತಿಯಲ್ಲಿ ವೆಚ್ಚವಾಗಿರುವುದನ್ನು ಖಾತರಿಪಡಿಸಿಕೊಳ್ಳಲು, ಜಿಲ್ಲಾಧಿಕಾರಿಗಳು ಪ್ರಧಾನಮಂತ್ರಿ ಉಜ್ವಲ ಯೋಜನೆಯ (ಪಿ.ಎಂ.ಯು.ವೈ) ವೆಬ್‌ಪೇಜ್‌ನಲ್ಲಿ ಪ್ರದರ್ಶಿಸಲ್ಪಟ್ಟಿರುವ ಫಲಾನುಭವಿಯ ಪಟ್ಟಿಯನ್ನು ಪರಿಶೀಲಿಸತಕ್ಕದ್ದು. ಒಂದು ವೇಳೆ ಫಲಾನುಭವಿಗಳನ್ನು ಗುರುತಿಸುವಲ್ಲಿ ವ್ಯತ್ಯಾಸವಾಗಿದ್ದಲ್ಲಿ, ಬಳಕೆ ಪ್ರಮಾಣ ಪತ್ರವನ್ನು ವಿತರಿಸಿದ 15 ದಿನಗಳೊಳಗಾಗಿ, ಆ ಬಗ್ಗೆ ತಕರಾರು ಸೂಚಿಸಬಹುದಾಗಿದೆ. ಇಲ್ಲದಿದ್ದಲ್ಲಿ, ಆ ಬಳಕೆ ಪ್ರಮಾಣ ಪತ್ರವನ್ನು ಅಂತಿಮವೆಂದು ಪರಿಗಣಿಸತಕ್ಕದ್ದು.

(iii) ಅನುದಾನದ ಬಳಕೆ ಮತ್ತು ಪ್ರಧಾನ ಮಂತ್ರಿ ಉಜ್ವಲ ಯೋಜನೆಯಡಿ ಬಳಕೆ ಪ್ರಮಾಣ ಪತ್ರಗಳ ವಿತರಣೆ ಪ್ರಕ್ರಿಯೆಯ ಸರಳೀಕರಣವನ್ನು ಇಲಾಖೆಯು ಖಚಿತಪಡಿಸಿಕೊಳ್ಳುವುದು.

ಅಗತ್ಯವಿದ್ದಲ್ಲಿ, ಬಳಕೆ ಪ್ರಮಾಣ ಪತ್ರಗಳ ವಿತರಣೆಯ ವಿಧಾನವನ್ನು ನಂತರದಲ್ಲಿ ಪುನರ್ ಪರಿಶೀಲಿಸಿ ಪರಿಷ್ಕರಿಸಬಹುದಾಗಿರುತ್ತದೆ.

5.15 ಆಹಾರ ಆಯುಕ್ತಾಲಯದಲ್ಲಿ ಪ್ರಧಾನ ಮಂತ್ರಿ ಉಜ್ವಲ ಯೋಜನೆ (ಪಿ.ಎಂ.ಯು.ವೈ)ಗಾಗಿ ಕಾರ್ಯಕ್ರಮ ನಿರ್ವಹಣಾ ಘಟಕದ ಸ್ಥಾಪನೆ

ಪ್ರಧಾನ ಮಂತ್ರಿ ಉಜ್ವಲ ಯೋಜನೆಯ ಅನುಷ್ಠಾನ, ಉಸ್ತುವಾರಿ ಇತ್ಯಾದಿ ದೈನಂದಿನ ಚಟುವಟಿಕೆಗಳನ್ನು ನಿರ್ವಹಣೆಗಾಗಿ ಆಹಾರ ಆಯುಕ್ತಾಲಯದಲ್ಲಿ ಮಟ್ಟದಲ್ಲಿ ಒಂದು ಕಾರ್ಯಕ್ರಮ ನಿರ್ವಹಣಾ ಘಟಕವನ್ನು ಸ್ಥಾಪಿಸಲಾಗುವುದು. ಈ ಘಟಕಕ್ಕೆ ಒಬ್ಬ ಹಿರಿಯ ಕೆ.ಎ.ಎಸ್. ಅಧಿಕಾರಿಯು ಮುಖ್ಯಸ್ಥರಾಗಿರತಕ್ಕದ್ದು.

6. ಎಲ್.ಪಿ.ಜಿ. ಬಳಕೆಯ ಸುರಕ್ಷತೆ ಕುರಿತು ಮಾಹಿತಿ ಮತ್ತು ಶಿಕ್ಷಣ ಅಭಿಯಾನ

6.1 ಎಲ್.ಪಿ.ಜಿ. ಬಳಕೆಯ ಸುರಕ್ಷತೆ ಅಂಶಗಳನ್ನು ಒಳಗೊಂಡಂತೆ ಪ್ರಧಾನ ಮಂತ್ರಿ ಉಜ್ವಲ ಯೋಜನೆಯ ಕುರಿತು ತೈಲ ಮಾರಾಟ ಕಂಪನಿಯವರು ಮುದ್ರಣ / ರೇಡಿಯೋ / ವಿದ್ಯುನ್ಮಾನ ಮತ್ತು ಡಿಜಿಟಲ್ ಮಾಧ್ಯಮಗಳಲ್ಲಿ ನಿರಂತರವಾಗಿ ಮಾಹಿತಿ ಮತ್ತು ಶಿಕ್ಷಣ ಅಭಿಯಾನ ಕಾರ್ಯಕ್ರಮಗಳನ್ನು ಏರ್ಪಡಿಸುವುದು.

6.2 ಪ್ರಧಾನ ಮಂತ್ರಿ ಉಜ್ವಲ ಯೋಜನೆಯ ಪ್ರತಿ ಫಲಾನುಭವಿಗೆ ಎಲ್.ಪಿ.ಜಿ.ಯ ಸುರಕ್ಷಿತ ಬಳಕೆಯ ಕುರಿತು ಚಿತ್ರಾತ್ಮಕ ಸೂಚನೆಗಳುಳ್ಳ ಒಂದು ಲ್ಯಾಮಿನೇಟೆಡ್ ಸುರಕ್ಷತಾ ಕಾರ್ಡನ್ನು ಒದಗಿಸಲಾಗುವುದು.

6.3 ಫಲಾನುಭವಿಯ ಮನೆಯಲ್ಲಿ ಅನಿಲ ಸಂಪರ್ಕವನ್ನು ಅಳವಡಿಸುವ ಸಮಯದಲ್ಲಿ ಎಲ್.ಪಿ.ಜಿ ಯ ಸುರಕ್ಷಿತ ಬಳಕೆಯ ಪ್ರಾತ್ಯಕ್ಷಿಕೆ ಮತ್ತು ತರಬೇತಿ ನೀಡುವುದನ್ನು ವಿತರಕರು ಖಚಿತಪಡಿಸುವುದು.

6.4 ಗ್ರಾಮಾಂತರ ಪ್ರದೇಶಗಳಲ್ಲಿ ಸಾಂಸ್ಥಿಕ ಅಥವಾ ವೈಯಕ್ತಿಕ ಎಲ್.ಪಿ.ಜಿ. ಬಳಕೆದಾರರುಗಳಾದ ಅಂಗನವಾಡಿ ಕೇಂದ್ರಗಳು/ ಶಾಲೆಗಳು ಅಥವಾ ಪಂಚಾಯತಿ ಕಾರ್ಯದರ್ಶಿಯಂತಹ ಗ್ರಾಮ ಮಟ್ಟದ ಕಾರ್ಯಕರ್ತರು ಅಥವಾ ವಿವಿಧ ಸ್ವಸಹಾಯ ಸಂಘಗಳ ಸದಸ್ಯರುಗಳಿಗೆ ತೈಲ ಮಾರುಕಟ್ಟೆ ಕಂಪನಿಗಳು ಪ್ರಾರಂಭಿಕವಾಗಿ ಎಲ್.ಪಿ.ಜಿ. ಬಳಕೆ ಸಮಯದಲ್ಲಿ ಅನುಸರಿಸಬೇಕಾದ ಅಂಶಗಳ ಬಗ್ಗೆ, ಎಲ್.ಪಿ.ಜಿ.ಯ

ಸುರಕ್ಷಾ ಸಾಗಾಣಿಕೆ, ಅಳವಡಿಕೆ ಮತ್ತು ಎಲ್.ಪಿ.ಜಿ.ಯ ಗೃಹ ಬಳಕೆ ಕುರಿತು ತರಬೇತಿ ನೀಡಿ ನುರಿತ ತರಬೇತುದಾರರನ್ನಾಗಿ ಮಾಡತಕ್ಕದ್ದು. ಇಂತಹ ತರಬೇತಿಗಳನ್ನು ಜಿಲ್ಲೆಯ ಜಿಲ್ಲಾಧಿಕಾರಿಯವರ ಮಾರ್ಗದರ್ಶನ ಮತ್ತು ನಿರ್ದೇಶನಗಳನ್ವಯ ಆಯೋಜಿಸುವುದು. ಇದರಿಂದಾಗಿ, ಗ್ರಾಮೀಣ ಪ್ರದೇಶಗಳಲ್ಲಿ ಮೊದಲ ಬಾರಿಗೆ ಎಲ್.ಪಿ.ಜಿ. ಗೃಹ ಬಳಕೆ ಮಾಡುತ್ತಿರುವವರಿಗೆ ಸುರಕ್ಷಾ ಅಂಶಗಳ ಬಗ್ಗೆ ಸಲಹೆ ನೀಡಲು ಮತ್ತು ಸಹಾಯ ಮಾಡಲು ರಾಜ್ಯದ ಪ್ರತಿ ಹಳ್ಳಿಯಲ್ಲಿಯೂ ತರಬೇತಿ ಪಡೆದ ಸ್ವಯಂ ಸೇವಕರು ಲಭ್ಯವಾಗುವಂತಾಗಬೇಕು.

6.5 ಪ್ರತಿ ಹಳ್ಳಿಯ ಕೆಲವು ಅಡುಗೆ ಕೋಣೆಗಳನ್ನು ಮಾದರಿ ಅಡುಗೆ ಕೋಣೆಗಳಾಗಿ ಅಭಿವೃದ್ಧಿಪಡಿಸುವುದು. ಅವುಗಳು ಅಂಗನವಾಡಿ ಕೇಂದ್ರ / ಶಾಲೆಗಳ ಅಥವಾ ಸ್ವಸಹಾಯ ಸಂಘಗಳ ಮಹಿಳಾ ಸದಸ್ಯರ (ಅವರ ಅನುಮತಿಯೊಂದಿಗೆ) ಮನೆಗಳ ಅಡುಗೆ ಕೋಣೆಗಳಾಗಿರಬಹುದು. ಈ ಮಾದರಿ ಅಡುಗೆ ಕೋಣೆಗಳ ಉದ್ದೇಶವು ಗ್ಯಾಸ್ ಸ್ಟವ್ ಮತ್ತು ಸಿಲಿಂಡರ್‌ಗಳನ್ನು ಅಳವಡಿಸುವ ವಿಧಾನದ ಪ್ರಾತ್ಯಕ್ಷಿಕೆ ನೀಡಲು, ಎಲ್.ಪಿ.ಜಿ. ಬಳಕೆಯ ತರಬೇತಿ ನೀಡಲು ಮತ್ತು ಎಲ್.ಪಿ.ಜಿ ಬಳಕೆಯ ಇತರೆ ಸುರಕ್ಷತಾ ಕ್ರಮಗಳನ್ನು ತಿಳಿಸಲು ಬಳಸಿಕೊಳ್ಳುವುದಾಗಿರುತ್ತದೆ.

7. ಉಸ್ತುವಾರಿ ಮತ್ತು ಮೇಲ್ವಿಚಾರಣೆ

7.1 ರಾಜ್ಯ ಮತ್ತು ಜಿಲ್ಲಾ ಮಟ್ಟದ ಸಮಿತಿಗಳು

ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯ ರಾಜ್ಯ ಮಟ್ಟದ ಉನ್ನತಾಧಿಕಾರ ಸಮಿತಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯ ಜಿಲ್ಲಾ ಮಟ್ಟದ ಸಮಿತಿಗಳು ಹಾಗೂ ಜಿಲ್ಲಾಧಿಕಾರಿಗಳು ಯೋಜನೆಯ ಅನುಷ್ಠಾನವನ್ನು ಕ್ರಮವಾಗಿ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಉಸ್ತುವಾರಿ ಮತ್ತು ಮೇಲ್ವಿಚಾರಣೆ ಮಾಡುವರು.

7.2 ದೂರವಾಣಿ ಕರೆ ಕೇಂದ್ರ

ರಾಜ್ಯ ಮಟ್ಟದ ಕರೆ ಕೇಂದ್ರವು ಪ್ರತಿ ದಿನ ಯೋಜನೆಯ ಫಲಾನುಭವಿಗಳ ಪೈಕಿ ಕನಿಷ್ಠ ಶೇ. 1ರಷ್ಟು ಸದಸ್ಯರಿಗಾದರೂ ಕರೆ ಮಾಡಿ, ಫಲಾನುಭವಿಗಳು ಗ್ಯಾಸ್ ಸ್ಟವ್ ಮತ್ತು ಸಿಲಿಂಡರ್ ಪಡೆದಿರುವ ಬಗ್ಗೆ, ಅನಿಲ ಸಂಪರ್ಕವನ್ನು ಸರಿಯಾದ ರೀತಿಯಲ್ಲಿ ಅಳವಡಿಕೆಯಾಗಿರುವ ಬಗ್ಗೆ ಮತ್ತು ಇತರೆ ಯಾವುದೇ ದೂರುಗಳ ಕುರಿತು ದೃಢೀಕರಿಸಿಕೊಳ್ಳುವುದು.

7.3 ಭೌತಿಕ ಪರಿಶೀಲನೆ

ಜಿಲ್ಲಾಧಿಕಾರಿಗಳು ತಾಲ್ಲೂಕು / ಗ್ರಾಮ ಪಂಚಾಯಿತಿಗಳು ಮತ್ತು ಸರ್ಕಾರಿ ಸಂಸ್ಥೆಗಳ ಮೂಲಕ ಫಲಾನುಭವಿಗಳ ಮನೆಯಲ್ಲಿ ಅನಿಲ ಸಂಪರ್ಕ ಅಳವಡಿಕೆಯಾಗಿರುವ ಬಗ್ಗೆ ಭೌತಿಕ ಪರಿಶೀಲನೆ ನಡೆಸಲು ಅಗತ್ಯ ವ್ಯವಸ್ಥೆಯನ್ನು ಮಾಡುವುದು.

8. ಪಾರದರ್ಶಕತೆ ಮತ್ತು ಸಾಮಾಜಿಕ ಲೆಕ್ಕ ಪರಿಶೋಧನೆ

8.1 ಪ್ರಧಾನ ಮಂತ್ರಿ ಉಜ್ವಲ ಯೋಜನೆಯ ರಾಜ್ಯ ಘಟಕದ ಅಂತರ್ಜಾಲ ತಾಣ

ಪ್ರಧಾನ ಮಂತ್ರಿ ಉಜ್ವಲ ಯೋಜನೆಯ ರಾಜ್ಯ ಘಟಕಕ್ಕಾಗಿ ಪ್ರತ್ಯೇಕ ಅಂತರ್ಜಾಲ ತಾಣವನ್ನು ಅಭಿವೃದ್ಧಿಪಡಿಸುವುದು ಹಾಗೂ ಇದಕ್ಕಾಗಿ ಆಹಾರ ಇಲಾಖೆಯ ವೆಬ್‌ಸೈಟ್ http://ahara.kar.nic.in ನಲ್ಲಿ ಒಂದು ಲಿಂಕ್ ನೀಡಲಾಗುವುದು. ಈ ತಾಣದಲ್ಲಿ ಯೋಜನೆಗೆ ಸಂಬಂಧಿಸಿದ ಮಾರ್ಗಸೂಚಿಗಳು; ಡಬಲ್ ಬರ್ನರ್ ಗ್ಯಾಸ್ ಸ್ಟೌವ್‌ಗೆ ನಿರ್ದಿಷ್ಟಪಡಿಸಿದ ಗುಣಮಟ್ಟದ ವಿವರಗಳು; ಜಿಲ್ಲಾವಾರು ಅರ್ಜಿಗಳ ಸ್ಥಿತಿಗತಿ; ಅನಿಲ ಸಂಪರ್ಕಗಳ ಅನುಮೋದನೆ, ಬಿಡುಗಡೆ ಹಾಗೂ ವಿತರಣೆ; ಫಲಾನುಭವಿಗಳ ಪಟ್ಟಿ; ಸುರಕ್ಷತಾ ಕ್ರಮಗಳ ಬಗ್ಗೆ ವಿಚಾರಣೆ ಮತ್ತು ಕುಂದುಕೊರತೆ ನಿವಾರಣೆಗಾಗಿ ಇರುವ ಕರೆ ಕೇಂದ್ರಗಳ ದೂರವಾಣಿ ಸಂಖ್ಯೆಗಳು ಇತ್ಯಾದಿ ಮಾಹಿತಿಗಳನ್ನು ಪ್ರದರ್ಶಿಸಲಾಗುವುದು.

8.2 ಎಸ್‌ಎಂಎಸ್ ಮೂಲಕ ಅನಿಲ ಸಂಪರ್ಕ ಬಿಡುಗಡೆಯ ಮಾಹಿತಿ:

ಫಲಾನುಭವಿಗಳ ಮನೆಯಲ್ಲಿ ಅನಿಲ ಸಂಪರ್ಕ ಅಳವಡಿಸಿರುವ ಬಗ್ಗೆ ತೈಲ ಮಾರುಕಟ್ಟೆ ಕಂಪನಿಗಳಿಂದ ಮಾಹಿತಿ ಸ್ವೀಕೃತವಾದ ಕೂಡಲೇ ಫಲಾನುಭವಿಗಳ ನೋಂದಾಯಿತ ಮೊಬೈಲ್ ಸಂಖ್ಯೆಗಳಿಗೆ ಎಸ್‌ಎಂಎಸ್ ಸಂದೇಶವನ್ನು ರವಾನಿಸಲಾಗುವುದು. ಈ ಎಸ್‌ಎಂಎಸ್ ಸಂದೇಶವು ಫಲಾನುಭವಿಯ ಮನೆಯಲ್ಲಿ ಅನಿಲ ಸಂಪರ್ಕ ಅಳವಡಿಕೆ ಕಾರ್ಯ ಪೂರ್ಣಗೊಂಡಿರುತ್ತದೆ ಎಂಬ ಮಾಹಿತಿ ನೀಡುತ್ತದೆ. ಈ ಸಂದೇಶವು ಎಲ್.ಪಿ.ಜಿ. ಬಳಕೆಯ ಸುರಕ್ಷತಾ ಅಂಶಗಳ ಬಗ್ಗೆ ಯಾವುದೇ ವಿಚಾರಣೆಗಾಗಿ ಮೀಸಲಾಗಿರುವ ಸಹಾಯವಾಣಿ ಸಂಖ್ಯೆ 1906 ನೊಂದಿಗೆ ಇತರೆ ಕುಂದುಕೊರತೆ ನಿವಾರಣೆಗೆ ಸಂಬಂಧಿಸಿದಂತೆ ಇರುವ ಕರೆ ಕೇಂದ್ರದ ದೂರವಾಣಿ ಸಂಖ್ಯೆಯ ಮಾಹಿತಿಗಳನ್ನು ಒಳಗೊಂಡಿರುತ್ತದೆ.

8.3 ಗ್ರಾಮಸಭೆಗಳ ಮೂಲಕ ಸಾಮಾಜಿಕ ಲೆಕ್ಕ ಪರಿಶೋಧನೆ

ಪ್ರಧಾನ ಮಂತ್ರಿ ಉಜ್ವಲ ಯೋಜನೆಯ ಸಾಮಾಜಿಕ ಲೆಕ್ಕ ಪರಿಶೋಧನೆಗಾಗಿ ಈ ಯೋಜನೆಯ ಫಲಾನುಭವಿಗಳ ಪಟ್ಟಿಯನ್ನು ಗ್ರಾಮಸಭೆಯಲ್ಲಿ ಮಂಡಿಸುವುದು ಸೇರಿದಂತೆ ಇತರೆ ಅಗತ್ಯ ಕ್ರಮಗಳನ್ನು ಜಿಲ್ಲಾಧಿಕಾರಿಗಳು / ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ತೆಗೆದುಕೊಳ್ಳುವುದು.

9 ಪಾಲುದಾರರ ಪಾತ್ರ ಹಾಗೂ ಜವಾಬ್ದಾರಿಗಳು

9.1 ರಾಜ್ಯದ ಆಹಾರ ಇಲಾಖೆ

ಪ್ರಧಾನ ಮಂತ್ರಿ ಉಜ್ವಲ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ಎಲ್ಲಾ ಕಾರ್ಯಗಳಿಗೆ ರಾಜ್ಯ ಮಟ್ಟದ ನೋಡಲ್ ಇಲಾಖೆಯಾಗಿ ಕಾರ್ಯನಿರ್ವಹಿಸುವುದು ಮತ್ತು ರಾಜ್ಯ ಮಟ್ಟದ ಇತರೆ ಕಾರ್ಯನಿರ್ವಾಹಕ ಇಲಾಖೆಗಳು, ತೈಲ ಮಾರುಕಟ್ಟೆ ಕಂಪನಿಗಳು, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಮಂತ್ರಾಲಯ, ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್‌ಐಸಿ), ಮುಂತಾದ ಸಂಸ್ಥೆಗಳೊಂದಿಗೆ ಸಮನ್ವಯ ಕಾರ್ಯನಿರ್ವಹಿಸುವುದು.

9.2 ಜಿಲ್ಲಾಧಿಕಾರಿಗಳು

ಜಿಲ್ಲೆಯಲ್ಲಿ ಪ್ರಧಾನ ಮಂತ್ರಿ ಉಜ್ವಲ ಯೋಜನೆಯ ಎಲ್ಲಾ ಆಯಾಮಗಳಿಗೆ ಸಂಬಂಧಿಸಿದಂತೆ ಯೋಜಿಸುವುದು, ಮೇಲುಸ್ತುವಾರಿ ಮತ್ತು ಅನುಷ್ಠಾನ ಕಾರ್ಯಗಳನ್ನು ಜಿಲ್ಲಾಧಿಕಾರಿಗಳು ಕೈಗೊಳ್ಳುವರು. ಅಂದರೆ;

i) ಪ್ರಧಾನ ಮಂತ್ರಿ ಉಜ್ವಲ ಯೋಜನೆಯ ಅನುಷ್ಠಾನಕ್ಕೆ ಅಗತ್ಯವಿರುವ ಅರ್ಜಿ ನಮೂನೆಗಳು ಸಾಕಷ್ಟು ಪ್ರಮಾಣದಲ್ಲಿ ನ್ಯಾಯಬೆಲೆ ಅಂಗಡಿ/ಸ್ಥಳೀಯ ಸಂಸ್ಥೆಗಳು ಮತ್ತು ಎಲ್‌ಪಿಜಿ ವಿತರಕರ ಬಳಿ ಲಭ್ಯವಿರುವುದನ್ನು ಖಾತರಿಪಡಿಸುವುದು.

ii) ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಮಂತ್ರಾಲಯವು ಸಂಬಂಧಿತ ವಂಚಿತ ಸೂಚಿಗಳ ಪ್ರಕಾರ ಶೋಧಿಸಿ ಸಿದ್ಧಪಡಿಸಿರುವ ಸಾಮಾಜಿಕ, ಆರ್ಥಿಕ ಮತ್ತು ಜಾತಿಗಣತಿ 2011ರ ಪಟ್ಟಿಯು ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ಲಭ್ಯವಾಗುವುದನ್ನು ಖಾತರಿಪಡಿಸುವುದು. ಈ ಪಟ್ಟಿಯನ್ನು ಆಹಾರ ಇಲಾಖೆ ಅಧಿಕಾರಿಗಳು/ಆಹಾರ ನಿರೀಕ್ಷಕರ ಮಾಡ್ಯೂಲ್‌ನಲ್ಲಿಯೂ ನೀಡಲಾಗುವುದು.

iii) ಅರ್ಹ ಫಲಾನುಭವಿಗಳಿಗೆ ಆಧಾರ್ ನೋಂದಣಿ ಮತ್ತು ಬ್ಯಾಂಕ್ ಖಾತೆಗಳನ್ನು (ಆಧಾರ್ ಜೋಡಣೆಯೊಂದಿಗೆ) ತೆರೆಯಲು ಸಹಕರಿಸುವುದು.

iv) ನಕಲೀಕರಣ ಮತ್ತು ಅನುಮೋದನೆಗಾಗಿ ಅರ್ಜಿಗಳನ್ನು ಎಲ್‌ಪಿಜಿ ವಿತರಕರು ಶೀಘ್ರ ಅಪ್‌ಲೋಡ್ ಮಾಡುವುದನ್ನು ಖಾತರಿಪಡಿಸುವುದು.

v) ಅನಿಲ ಸಂಪರ್ಕಗಳ ವಿತರಣೆಗಾಗಿ ಸೂಕ್ತ ಹಂತಗಳಲ್ಲಿ ಶಿಬಿರಗಳನ್ನು ಆಯೋಜಿಸುವುದು.

vi) ಅನಿಲ ಸಂಪರ್ಕಗಳನ್ನು ಬಿಡುಗಡೆ / ವಿತರಿಸಿದ 10 ದಿನಗಳೊಳಗೆ ಫಲಾನುಭವಿಗಳ ಮನೆಯಲ್ಲಿ ಅಳವಡಿಕೆಯಾಗಿರುವ ಬಗ್ಗೆ ಹಿಂಬಾಲನಾ (track) ಕ್ರಮ ವಹಿಸುವುದು

vii) ವಿತರಕರು ಫಲಾನುಭವಿಗಳಿಗೆ ಸಕಾಲಿಕವಾಗಿ ಭರ್ತಿ ಮಾಡಿದ ಸಿಲಿಂಡರ್‌ಗಳನ್ನು ತಲುಪಿಸುವ ಸೇವೆಯನ್ನು ಹಿಂಬಾಲಿಸುವುದು.

viii) ಯೋಜನೆಯ ಪ್ರಗತಿಯನ್ನು ಪರಿಶೀಲಿಸಲು ಪ್ರಧಾನ ಮಂತ್ರಿ ಉಜ್ವಲ ಯೋಜನೆಯ ಜಿಲ್ಲಾ ಮಟ್ಟದ ಸಮಿತಿಯ ನಿಯಮಿತ ಸಭೆಗಳನ್ನು ಆಯೋಜಿಸುವುದು.

ix) ಪ್ರಧಾನ ಮಂತ್ರಿ ಉಜ್ವಲ ಯೋಜನೆಯ ಫಲಾನುಭವಿಗಳಿಗೆ ಎಲ್‌ಪಿಜಿ ಬಳಕೆಯ ಸುರಕ್ಷತಾ ವಿಧಾನಗಳ ಬಗ್ಗೆ ತರಬೇತಿ ನೀಡಲು ತಾಲ್ಲೂಕು/ಗ್ರಾಮ ಮಟ್ಟದಲ್ಲಿ ನುರಿತ ತರಬೇತುದಾರರ (ಅಂಗನವಾಡಿ ಕಾರ್ಯಕರ್ತರು/ಸ್ವ-ಸಹಾಯ ಸಂಘದ ಸದಸ್ಯರು / ಪಂಚಾಯತ್ ಕಾರ್ಯದರ್ಶಿಗಳು ಇತ್ಯಾದಿ) ಜಾಲವೊಂದನ್ನು ರೂಪಿಸುವುದು.

x) ಎಲ್.ಪಿ.ಜಿ.ಯ ಸುರಕ್ಷಿತ ಬಳಕೆಯ ಬಗ್ಗೆ ನಿಯಮಿತವಾಗಿ ತರಬೇತಿ ಹಾಗೂ ಮಾಹಿತಿ ಮತ್ತು ಶಿಕ್ಷಣ ಅಭಿಯಾನಗಳ ಆಯೋಜನೆಯನ್ನು ಖಾತರಿಪಡಿಸಿಕೊಳ್ಳುವುದು.

xi) ಎಲ್.ಪಿ.ಜಿ.ಯ ಅಳವಡಿಕೆ ಹಾಗೂ ಬಳಕೆಯ ಸುರಕ್ಷತಾ ವಿಧಾನಗಳ ಬಗ್ಗೆ ನೇರ ಪ್ರಾತ್ಯಕ್ಷಿಕೆ ನೀಡಲು ಗ್ರಾಮ/ವಾರ್ಡ್‌ಗಳಲ್ಲಿ ಮಾದರಿ ಅಡುಗೆ ಕೋಣೆಗಳನ್ನು ಮನೆ / ಸಂಸ್ಥೆಗಳ ಮಾಲೀಕರ ಅನುಮತಿಯೊಂದಿಗೆ ಗುರುತಿಸುವುದು.

xii) ಪ್ರಧಾನ ಮಂತ್ರಿ ಉಜ್ವಲ ಯೋಜನೆಯ ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ಗ್ರಾಮ ಸಭೆಗಳ ಮೂಲಕ ನಿರ್ವಹಿಸುವುದು.

10.ಯೋಜನೆಯ ಅನುಷ್ಠಾನದಲ್ಲಿ ತೈಲ ಮಾರುಕಟ್ಟೆ ಕಂಪನಿಗಳೊಂದಿಗಿನ ಪಾಲುದಾರಿಕೆ:

ತೈಲ ಮಾರುಕಟ್ಟೆ ಕಂಪನಿಗಳು

1. ಅರ್ಹ ಫಲಾನುಭವಿಗಳ ಪಟ್ಟಿಯನ್ನು ರಾಜ್ಯ ಸರ್ಕಾರ ಹಾಗೂ ಜಿಲ್ಲಾಧಿಕಾರಿಗಳೊಂದಿಗೆ ಹಂಚಿಕೊಳ್ಳುವುದು. ತೈಲ ಮಾರುಕಟ್ಟೆ ಕಂಪನಿಗಳು ಅನುಮೋದಿತ ಅರ್ಜಿಗಳ ವಿವರಗಳನ್ನು ಎನ್.ಐ.ಸಿ.ಯು ಅಭಿವೃದ್ಧಿಪಡಿಸಿದ ವೆಬ್ ಸರ್ವಿಸ್ ಮೂಲಕ ಪ್ರತಿ ದಿನ ಸಂಜೆ ಆಹಾರ ಸರ್ವರ್‌ಗೆ ಕಳುಹಿಸುವುದು.
2. ಫಲಾನುಭವಿಗಳ ಮನೆಯಲ್ಲಿ ಗ್ಯಾಸ್ ಸ್ಟವ್ ಮತ್ತು ಅನಿಲ ಸಂಪರ್ಕಗಳನ್ನು ಸಂಪೂರ್ಣವಾಗಿ ಅಳವಡಿಸಿದ ನಂತರ ಫಲಾನುಭವಿಗಳ ವಿವರಗಳನ್ನು ಪ್ರತಿ ದಿನ ಆಹಾರ ಇಲಾಖೆಯ ಸರ್ವರ್‌ಗೆ ಕಳುಹಿಸುವುದು.
3. ರಾಜ್ಯ ಸರ್ಕಾರದಿಂದ ಸಬ್ಸಿಡಿಯ ಕ್ಲೇಮ್‌ಗಳನ್ನು ಬಿಡುಗಡೆ ಮಾಡುವ ಮುನ್ನ ಎಲ್‌ಪಿಜಿ ವಿತರಕರುಗಳಿಂದ ಅನಿಲ ಸಂಪರ್ಕ ನೀಡಿರುವ ಬಗ್ಗೆ ಪರಿಶೀಲಿಸಲು ಒಂದು ವ್ಯವಸ್ಥೆಯನ್ನು ರೂಪಿಸುವುದು.
4. ತೈಲ ಕಂಪನಿಗಳ ಹಾಗೂ ಆಹಾರ ಇಲಾಖೆಯ ವೆಬ್‌ಸೈಟ್‌ಗಳಲ್ಲಿನ ಲಭ್ಯವಾಗುವ ಮಾಹಿತಿಯ ಅಂತರವು ಕನಿಷ್ಠವಾಗಿರುವಂತೆ ಕಾಲಕಾಲಕ್ಕೆ ವೆಬ್ ಸರ್ವಿಸನ್ನು ಕಾರ್ಯಗತಗೊಳಿಸುವುದು.
5. ಜಿಲ್ಲೆಯಲ್ಲಿ ಪ್ರಧಾನ ಮಂತ್ರಿ ಉಜ್ವಲ ಯೋಜನೆಗಾಗಿ ಒಬ್ಬ ನೋಡಲ್ ಅಧಿಕಾರಿಯನ್ನು ನೇಮಿಸುವುದು ಹಾಗೂ ಅವರು ನಿರಂತರವಾಗಿ ಲಭ್ಯವಿರುವುದನ್ನು ಖಾತರಿಪಡಿಸುವುದು.
6. ವಿಶೇಷವಾಗಿ ಎಲ್‌ಪಿಜಿ ಬಳಕೆಯ ಸುರಕ್ಷತಾ ವಿಧಾನಗಳ ಬಗ್ಗೆ ಮಾಹಿತಿ ಮತ್ತು ಶಿಕ್ಷಣ ಅಭಿಯಾನದ ಮೂಲಕ ರಾಜ್ಯಾದ್ಯಂತ ನಿರಂತರವಾಗಿ ಪ್ರಚಾರ ನೀಡಲು ಕ್ರಮವಹಿಸುವುದು.
7. ಎಲ್‌ಪಿಜಿ ವಿತರಕರುಗಳ ಮೇಲುಸ್ತುವಾರಿ, ಸ್ಟವ್‌ಗಳ ಗುಣಮಟ್ಟ ಹಾಗೂ ನಿಗಧಿತ ಸಮಯದಲ್ಲಿ ಅನಿಲ ಸಂಪರ್ಕ ಅಳವಡಿಸಿರುವ ಬಗ್ಗೆ ಪರಿಶೀಲಿಸುವುದು.
8. ಎಲ್‌ಪಿಜಿ ವಿತರಕರುಗಳ ಸಂಖ್ಯೆಯನ್ನು ಹೆಚ್ಚಿಸಲು ಕ್ರಮವಹಿಸುವುದು.
9. ಪ್ರಧಾನ ಮಂತ್ರಿ ಉಜ್ವಲ ಯೋಜನೆಯ ಫಲಾನುಭವಿಗಳಿಗೆ ಸಹಾಯ ಧನವನ್ನು ಅವರ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡುವ ಹಾಗೂ ಮರು ಭರ್ತಿ ಸಿಲಿಂಡರ್‌ಗಳನ್ನು ನೀಡಲು ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಉತ್ತಮ ಗುಣಮಟ್ಟದ ಸೇವೆಯನ್ನು ನೀಡುವುದು.
10. ಜಿಲ್ಲಾಧಿಕಾರಿಗಳ ಮಾರ್ಗದರ್ಶನ ಮತ್ತು ಮೇಲುಸ್ತುವಾರಿಯಲ್ಲಿ ಕ್ಯಾಂಪ್‌ಗಳ ಮೂಲಕ ಅನಿಲ ಸಂಪರ್ಕಗಳನ್ನು ಬಿಡುಗಡೆಗೊಳಿಸುವುದು.
11. ಯೋಜನೆಯ ಅನುಷ್ಠಾನದಲ್ಲಿ ಎದುರಾಗುವ ಕುಂದುಕೊರತೆಗಳನ್ನು ಪರಿಹರಿಸಲು ಜಿಲ್ಲಾಧಿಕಾರಿಗಳು ಹಾಗೂ ಆಹಾರ ಇಲಾಖೆಯೊಂದಿಗೆ ಉತ್ತಮ ಸಮನ್ವಯತೆಯನ್ನು ಖಾತರಿಪಡಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಅರ್ಚನ ಎಂ.ಎಸ್
ಸರ್ಕಾರದ ಅಧೀನ ಕಾರ್ಯದರ್ಶಿ,
ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳ
ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು:

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I	ಬೆಂಗಳೂರು, ಮಂಗಳವಾರ, ಡಿಸೆಂಬರ್ ೬, ೨೦೧೬ (ಮಾರ್ಗಶಿರ ೧೫, ಶಕ ವರ್ಷ ೧೯೩೮)	ನಂ. ೧೩೩೪
Part–I	Bengaluru, Tuesday, December 6, 2016 (Margashira 15, Shaka Varsha 1938)	No. 1334

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 41 ಹೆಚ್‌ಹೆಚ್‌ಎಲ್ 2016 ಬೆಂಗಳೂರು, ದಿನಾಂಕ: 06/12/2016

ಕುಮಾರಿ ಜೆ. ಜಯಲಲಿತ, ತಮಿಳುನಾಡಿನ ಮುಖ್ಯಮಂತ್ರಿಗಳು, ದಿನಾಂಕ: 05/12/2016 ರಂದು ನಿಧನರಾದ ವಿಷಯವನ್ನು ರಾಜ್ಯ ಸರ್ಕಾರವು ತೀವ್ರ ಸಂತಾಪದಿಂದ ಈ ಮೂಲಕ ಪ್ರಕಟಿಸಿದೆ.

ದಿವಂಗತರ ಗೌರವಾರ್ಥವಾಗಿ ದಿನಾಂಕ: 06/12/2016 ರಂದು ಒಂದು ದಿನ ರಾಜ್ಯಾದ್ಯಂತ ಶೋಕಾಚರಣೆಯನ್ನು ಆಚರಿಸಲಾಗುವುದು. ಈ ಅವಧಿಯಲ್ಲಿ ಯಾವುದೇ ಅಧಿಕೃತ ಸಾರ್ವಜನಿಕ ಸಮಾರಂಭಗಳು, ಮನರಂಜನಾ ಕಾರ್ಯಕ್ರಮಗಳು ಇರುವುದಿಲ್ಲ ಹಾಗೂ ನಿಯತವಾಗಿ ರಾಷ್ಟ್ರಧ್ವಜವನ್ನು ಹಾರಿಸಲ್ಪಡುವ ಸರ್ಕಾರದ ಎಲ್ಲಾ ಕಟ್ಟಡಗಳ ಮೇಲೆ ರಾಷ್ಟ್ರಧ್ವಜವನ್ನು ಅರ್ಧ ಮಟ್ಟದಲ್ಲಿ ಹಾರಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಪಿ. ವಿಜಯ್
ಸರ್ಕಾರದ ಉಪ ಕಾರ್ಯದರ್ಶಿ,
ಸಿಆಸುಇ (ರಾಜ್ಯ ಶಿಷ್ಟಾಚಾರ).

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 100

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–I	ಬೆಂಗಳೂರು, ಶುಕ್ರವಾರ, ಡಿಸೆಂಬರ್ ೯, ೨೦೧೬ (ಮಾರ್ಗಶಿರ ೧೮, ಶಕ ವರ್ಷ ೧೯೩೮)	ನಂ. ೧೩೪೬
Part–I	Bengaluru, Friday, December 9, 2016 (Margashira 18, Shaka Varsha 1938)	No. 1346

ಕರ್ನಾಟಕ ಸರ್ಕಾರದ ನಡವಳಿಗಳು

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವಾಲಯ

ವಿಷಯ: ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಗಳಿಗೆ ಕಡ್ಡಾಯಗೊಳಿಸಿರುವ ಪ್ರಕಾರ್ಯಗಳನ್ನು ನಿರ್ವಹಿಸುವ ಬಗ್ಗೆ.

ಪ್ರಸ್ತಾವನೆ:

ಕರ್ನಾಟಕದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜನಸ್ನೇಹಿಯನ್ನಾಗಿಸಲು ಹಾಗೂ ಜನರು ಆಡಳಿತ ಮತ್ತು ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡಲು ಪಂಚಾಯತ್ ರಾಜ್ ಅಧಿನಿಯಮದ ಪ್ರಕರಣಗಳನ್ನು ಅಧ್ಯಯನ ಮಾಡಿ ಸೂಕ್ತ ತಿದ್ದುಪಡಿಯನ್ನು ಶಿಫಾರಸ್ಸುಮಾಡಲು ಉನ್ನತ ಮಟ್ಟದ ತಜ್ಞರ ಸಮಿತಿಯನ್ನು ಮಾನ್ಯ ಶ್ರೀ ಕೆ.ಆರ್.ರಮೇಶ್‌ಕುಮಾರ್, ಮಾಜಿ ವಿಧಾನ ಸಭಾ ಅಧ್ಯಕ್ಷರು ಹಾಗೂ ಹಾಲಿ ಸಚಿವರ ಅಧ್ಯಕ್ಷತೆಯಲ್ಲಿ ರಚಿಸಲಾಗಿತ್ತು. ಸಮಿತಿಯು ನೀಡಿದ ಶಿಫಾರಸ್ಸಿನನ್ವಯ ಪ್ರಮುಖ 88 ಪ್ರಕರಣಗಳಿಗೆ ತಿದ್ದುಪಡಿ ತರಲಾಗಿದೆ.

ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಗಳು ಅಧಿನಿಯಮದ ಅನುಸೂಚಿ I, II ಮತ್ತು III (ಪ್ರಕರಣ 312) ರಲ್ಲಿರುವ ಕಾರ್ಯಚಟುವಟಿಕೆಗಳನ್ನು ನಿರ್ಧಿಷ್ಟಪಡಿಸಲಾಗಿದೆ. ಈ ಪ್ರಕಾರ್ಯಗಳ ಜೊತೆಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ ಪ್ರಕರಣ 58–1ಎ, 58(2), 145(2), 145(3), ಮತ್ತು 184(4) ರಲ್ಲಿ ಕಡ್ಡಾಯಗೊಳಿಸಿರುವ ಪ್ರಕಾರ್ಯಗಳನ್ನು ಸಹ ಮೂರು ಹಂತದ ಪಂಚಾಯತ್ ಸಂಸ್ಥೆಗಳು ನಿರ್ವಹಿಸಬೇಕಾಗಿದೆ.

ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 1138 ಗ್ರಾಪಂಅ 2016, ದಿನಾಂಕ 09.12.2016

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಗಳು ಪ್ರಕರಣ 58–1ಎ, 58(2), 145(2), 145(3) ಮತ್ತು 184(4) ರಲ್ಲಿ ಕಡ್ಡಾಯಗೊಳಿಸಲಾಗಿರುವ ಕೆಳಗಿನ ಪ್ರಕಾರ್ಯಗಳನ್ನು ನಿರ್ವಹಿಸುವಂತೆ ಆದೇಶಿಸಿದೆ.

1. ಗ್ರಾಮ ಪಂಚಾಯತಿಯ ಕಡ್ಡಾಯ ಕರ್ತವ್ಯಗಳು:

ಅನುಸೂಚಿ–I ರಲ್ಲಿ ಏನೇ ಇದ್ದರೂ, ಗ್ರಾಮ ಪಂಚಾಯತಿಯ ವಶದಲ್ಲಿರುವ ಗ್ರಾಮ ಪಂಚಾಯತಿ ನಿಧಿಯು ಅನುಮತಿಸುವಷ್ಟರಮಟ್ಟಿಗೆ ಗ್ರಾಮ ಪಂಚಾಯತಿಯು ಈ ಕೆಳಗಿನ ವಿಷಯಗಳ ಬಗ್ಗೆ ಪಂಚಾಯತಿ ಪ್ರದೇಶದೊಳಗೆ ಸೂಕ್ತವಾಗಿ ಅವಕಾಶ ಕಲ್ಪಿಸುವುದು ಕಡ್ಡಾಯವಾಗತಕ್ಕದ್ದು.

1) ಪ್ರತಿ ವರ್ಷ ಶೇಕಡಾ ಹತ್ತರಷ್ಟು ಮನೆಗಳಿಗೆ ಕಡಿಮೆ ಇಲ್ಲದಂತೆ ಶೌಚಗೃಹಗಳನ್ನು ಒದಗಿಸುವುದು ಮತ್ತು ಸಾಧ್ಯವಾದಷ್ಟು ಬೇಗನೆ ಎಲ್ಲ ಮನೆಗಳಿಗೂ ಈ ಸೌಲಭ್ಯವನ್ನು ಒದಗಿಸುವ ಗುರಿ ಸಾಧಿಸುವುದು.

2) ಪುರುಷರು ಮತ್ತು ಮಹಿಳೆಯರಿಗಾಗಿ ಸಾಕಷ್ಟು ಸಮುದಾಯ ಶೌಚಗೃಹಗಳನ್ನು ನಿರ್ಮಿಸುವುದು ಮತ್ತು ಅವುಗಳನ್ನು ನಿರ್ವಹಿಸುವುದು.

3) ಸಾಕಷ್ಟು ಸಂಪನ್ಮೂಲಗಳನ್ನು ಸೃಜಿಸಿ ತಾನೇ ಅಥವಾ ವಾರ್ಷಿಕ ಕರಾರಿನ ಮೂಲಕವಾಗಲಿ ನೀರು ಪೂರೈಕೆ ಕಾಮಗಾರಿಗಳನ್ನು ನಿರ್ವಹಿಸುವುದು.

4) ಈ ಅಧಿನಿಯಮದಡಿ ವಿಧಿಸಬಹುದಾದ ತೆರಿಗೆಗಳು, ದರಗಳು ಮತ್ತು ಶುಲ್ಕಗಳನ್ನು ನಿಯತಕಾಲಿಕವಾಗಿ ಪರಿಶೀಲಿಸುವುದು ಮತ್ತು ವಸೂಲು ಮಾಡುವುದು.

5) ಪ್ರಾಥಮಿಕ ಶಾಲೆಗೆ ಮಕ್ಕಳ ಸಾರ್ವತ್ರಿಕ ದಾಖಲಾತಿಯನ್ನು ಖಚಿತಪಡಿಸಿಕೊಳ್ಳುವುದು.

6) ಮಕ್ಕಳಿಗೆ ಸಾರ್ವತ್ರಿಕವಾಗಿ ರೋಗನಿರೋಧಕ ಚುಚ್ಚು ಮದ್ದು ನೀಡುವ ಕಾರ್ಯಕ್ರಮಗಳನ್ನು ಸಾಧಿಸುವುದು.

7) ಜನನ ಮತ್ತು ಮರಣಗಳ ತ್ವರಿತ ನೋಂದಣಿ ಮತ್ತು ಅದನ್ನು ವರದಿ ಮಾಡುವುದನ್ನು ಖಚಿತಪಡಿಸಿಕೊಳ್ಳುವುದು.

8) ನೈರ್ಮಲ್ಯ ವ್ಯವಸ್ಥೆ ಮತ್ತು ಸರಿಯಾದ ಚರಂಡಿ ವ್ಯವಸ್ಥೆಯನ್ನು ಒದಗಿಸುವುದು.

9) ಸಾರ್ವಜನಿಕ ರಸ್ತೆಗಳ ನಿರ್ಮಾಣ, ದುರಸ್ತಿ ಮತ್ತು ನಿರ್ವಹಣೆ ಮಾಡುವುದು.

10) ಸಾರ್ವಜನಿಕ ರಸ್ತೆ ಅಥವಾ ಸಾರ್ವಜನಿಕ ಸ್ಥಳಗಳ ಮೇಲಿನ ಒತ್ತುವರಿಗಳನ್ನು ತೆಗೆದುಹಾಕುವುದು.

11) ಸಾಕಷ್ಟು ರಸ್ತೆ ದೀಪಗಳನ್ನು ಒದಗಿಸುವುದು ಮತ್ತು ವಿದ್ಯುತ್ ಶುಲ್ಕಗಳನ್ನು ನಿಯತವಾಗಿ ಸಂದಾಯ ಮಾಡುವುದು.

12) ಅನೈರ್ಮಲ್ಯಕರ ಗುಂಡಿಗಳನ್ನು ತುಂಬಿಸುವುದು ಮತ್ತು ಗ್ರಾಮಗಳಲ್ಲಿ ಅನಾರೋಗ್ಯಕರ ಪ್ರದೇಶಗಳನ್ನು ಸ್ವಚ್ಛತೆಗೊಳಿಸುವುದು.

13) ಹುಚ್ಚುನಾಯಿಗಳನ್ನು ಮತ್ತು ಮಾಲೀಕರಿಲ್ಲದ ನಾಯಿಗಳನ್ನು ಸಾಯಿಸುವುದು.

14) ಗ್ರಾಮ ಪಂಚಾಯತಿಯಲ್ಲಿ ನಿಹಿತವಾಗಿರುವ ಎಲ್ಲ ಸಮುದಾಯ ಆಸ್ತಿಗಳನ್ನು ನಿರ್ವಹಿಸುವುದು.

15) ಜನಗಣತಿ, ಬೆಳೆ–ಗಣತಿ, ಜಾನುವಾರು–ಗಣತಿ, ನಿರುದ್ಯೋಗಿಗಳ ಮತ್ತು ಬಡತನ ರೇಖೆಗಿಂತ ಕೆಳಗಿರುವ ವ್ಯಕ್ತಿಗಳ ಗಣತಿಗೆ ಸಂಬಂಧಪಟ್ಟ ದಾಖಲೆಗಳನ್ನು ನಿರ್ವಹಿಸುವುದು.

16) ನಿರುಪಯುಕ್ತ ವಸ್ತುಗಳನ್ನು ಮತ್ತು ಗೊಬ್ಬರವನ್ನು ರಾಶಿ ಹಾಕುವುದಕ್ಕೆ ವಾಸದ ಮನೆಗಳಿಂದ ದೂರದಲ್ಲಿರುವ ಜಾಗಗಳನ್ನು ಪ್ರತ್ಯೇಕವಾಗಿ ಗುರುತಿಸುವುದು.

17) ಜೈವಿಕ ವೈವಿಧ್ಯತೆಯನ್ನು ಸಂರಕ್ಷಿಸುವುದು.

18) ಗ್ರಾಮ ಪಂಚಾಯತಿಯು, ಪಂಚಾಯತಿ ಪ್ರದೇಶದಲ್ಲಿ ಪಂಚಾಯತಿ ಪ್ರದೇಶದ ನಿವಾಸಿಗಳ ಆರೋಗ್ಯ, ಸುರಕ್ಷತೆ, ಶಿಕ್ಷಣ, ಸುಖ ಸೌಖ್ಯ, ಸೌಕರ್ಯ ಅಥವಾ ಸಾಮಾಜಿಕ ಅಥವಾ ಆರ್ಥಿಕ ಉನ್ನತಿಯನ್ನು ವೃದ್ಧಿಸುವಂತಹ ಇತರ ಕೆಲಸಗಳನ್ನು ಅಥವಾ ಮಾರ್ಗೋಪಾಯಗಳನ್ನು ನಿರ್ವಹಿಸಲು ಸಹ ಏರ್ಪಾಟು ಮಾಡಬಹುದು.

2. ತಾಲ್ಲೂಕು ಪಂಚಾಯತಿಯ ಕಡ್ಡಾಯ ಕರ್ತವ್ಯಗಳು:

ಅನುಸೂಚಿ II ರಲ್ಲಿ ಏನೇ ಇದ್ದರೂ, ತಾಲೂಕು ಪಂಚಾಯತಿಯ ವಶದಲ್ಲಿರುವ ತಾಲೂಕು ಪಂಚಾಯತಿ ನಿಧಿಯು ಅನುಮತಿಸುವಷ್ಟರಮಟ್ಟಿಗೆ ತಾಲೂಕು ಪಂಚಾಯತಿಗೆ ಈ ಕೆಳಗಿನ ವಿಷಯಗಳ ಬಗ್ಗೆ ಅದರ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಪ್ರದೇಶದೊಳಗೆ ಸೂಕ್ತವಾಗಿ ಅವಕಾಶ ಕಲ್ಪಿಸುವುದು ಕಡ್ಡಾಯವಾಗಿರತಕ್ಕದ್ದು.

1) ದಿನ ಒಂದಕ್ಕೆ ಪ್ರತಿ ವ್ಯಕ್ತಿಗೆ ನಲವತ್ತು ಲೀಟರುಗಳಿಗೆ ಕಡಿಮೆ ಇಲ್ಲದಂತೆ ನೀರು ಪೂರೈಸುವುದಕ್ಕಾಗಿ ನೀರು ಪೂರೈಕೆ ಕಾಮಗಾರಿಗಳನ್ನು ನಿರ್ಮಿಸುವುದು ಮತ್ತು ಹೆಚ್ಚಿಸುವುದು.

2) ತಾಲೂಕಿನೊಳಗಿನ ಗ್ರಾಮ ಪಂಚಾಯತಿಯ ಕಾರ್ಯಚಟುವಟಿಕೆಗಳು:

(ಎ) ಗ್ರಾಮ ಸಭೆಯನ್ನು ನಡೆಸುವುದು.

(ಬಿ) ನೀರು ಪೂರೈಕೆ ಕಾಮಗಾರಿಗಳ ನಿರ್ವಹಣೆ.

(ಸಿ) ವೈಯಕ್ತಿಕ ಮತ್ತು ಸಮುದಾಯ ಶೌಚಗೃಹವನ್ನು ನಿರ್ಮಿಸುವುದು.

(ಡಿ) ತೆರಿಗೆಗಳು, ದರಗಳು ಮತ್ತು ಶುಲ್ಕಗಳನ್ನು ವಸೂಲು ಮಾಡುವುದು ಮತ್ತು ಅವುಗಳ ಪರಿಷ್ಕರಣೆ.

(ಇ) ವಿದ್ಯುತ್ ಶುಲ್ಕಗಳನ್ನು ಸಂದಾಯ ಮಾಡುವುದು.

(ಎಫ್) ಶಾಲೆಗಳಿಗೆ ಮಕ್ಕಳ ನೋಂದಣಿ.

(ಜಿ) ರೋಗ ನಿರೋಧಕ ಚುಚ್ಚು ಮದ್ದುಗಳ ಪ್ರಗತಿ.

ಇವುಗಳ ಬಗ್ಗೆ ಅರ್ಧ ವಾರ್ಷಿಕ ವರದಿಯನ್ನು ಮೇಲ್ಪಟ್ಟ ಪ್ರಾಧಿಕಾರಕ್ಕೆ ಸಲ್ಲಿಸುವುದು.

3) ಪ್ರಾಥಮಿಕ ಶಾಲಾ ಕಟ್ಟಡಗಳನ್ನು ಸುಸ್ಥಿತಿಯಲ್ಲಿಡುವುದು ಮತ್ತು ಸಾಕಷ್ಟು ಪಾಠದ ಕೊಠಡಿಗಳನ್ನು ಮತ್ತು ನೀರು ಪೂರೈಕೆ ಹಾಗೂ ನೈರ್ಮಲ್ಯ ವ್ಯವಸ್ಥೆಯನ್ನು ಒದಗಿಸುವುದು.

4) ಗ್ರಾಮಗಳಲ್ಲಿ ವಾಸದ ಮನೆಗಳಿಂದ ದೂರದಲ್ಲಿ ಗೊಬ್ಬರದ ಗುಂಡಿಗಳಿಗೆ ಜಾಗ ಗುರುತಿಸುವುದಕ್ಕಾಗಿ ಭೂಮಿಯನ್ನು ಆರ್ಜಿಸುವುದು.

3. ಜಿಲ್ಲಾ ಪಂಚಾಯತಿಯ ಕಡ್ಡಾಯ ಕರ್ತವ್ಯಗಳು:

ಅನುಸೂಚಿ III ರಲ್ಲಿ ಏನೇ ಇದ್ದರೂ, ಜಿಲ್ಲಾ ಪಂಚಾಯತಿಯ ವಶದಲ್ಲಿರುವ ನಿಧಿಯು ಅನುಮತಿಸುವಷ್ಟರಮಟ್ಟಿಗೆ, ಜಿಲ್ಲಾ ಪಂಚಾಯತಿಯು ಈ ಕೆಳಗಿನ ವಿಷಯಗಳ ಬಗ್ಗೆ ಅದರ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಪ್ರದೇಶದೊಳಗೆ ಸೂಕ್ತವಾಗಿ ಅವಕಾಶ ಕಲ್ಪಿಸುವುದು ಕಡ್ಡಾಯವಾಗತಕ್ಕದ್ದು.

1) ಸರ್ಕಾರವು ವಿಧಿಸಲಾಗಿರುವ ಸೂತ್ರಗಳಿಗೆ ಅನುಸಾರವಾಗಿ ಐದು ವರ್ಷಗಳೊಳಗೆ ಸಂಪೂರ್ಣ ಜನತೆಯನ್ನು ಒಳಗೊಳ್ಳುವಂತೆ ಆರೋಗ್ಯ ಕೇಂದ್ರಗಳನ್ನು ಹಾಗೂ ಪ್ರಸೂತಿ ಕೇಂದ್ರಗಳನ್ನು ಸ್ಥಾಪಿಸುವುದು.

2) ಕುಡಿಯುವ ನೀರಿನ ಬಾವಿಗಳಲ್ಲಿ ನೀರು ಇರುವಂತೆ ನೋಡಿಕೊಳ್ಳುವುದಕ್ಕಾಗಿ ಅಂತರ್ಜಲ ಒರತೆ ಬತ್ತಿ ಹೋಗದಂತೆ ನಿರ್ಮಿತಿಗಳನ್ನು ರಚಿಸುವುದು.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ದಾವಣಗೆರೆ ಜಿಲ್ಲೆ, ದಾವಣಗೆರೆ

ಚುನಾವಣಾ ನೋಟೀಸು

ನಂ. ರಾಚು ಸಿಆರ್. 60 /2016-2017, ದಿನಾಂಕ : 22-12-2016

ಸರ್ಕಾರದ ಪತ್ರ ನಂ. ಸಇ 175 ಎಂಆರ್ಇ 2016 (ಭಾಗ) ದಿನಾಂಕ 16-11-2016 ರ ನಿರ್ದೇಶನದಂತೆ ಹಾಗೂ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) ನಿಯಮಗಳು 1968 ರ ನಿಯಮ 7 ರಲ್ಲಿ ಪ್ರದತ್ತವಾದ ಅಧಿಕಾರದ ಅನ್ವಯ ದಾವಣಗೆರೆ ಜಿಲ್ಲೆಯ **ಜಗಳೂರು** ತಾಲ್ಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಕೆಳಕಾಣಿಸಿದ ಕ್ಷೇತ್ರಗಳಿಂದ ಸದಸ್ಯರನ್ನು ಚುನಾಯಿಸಲು ಚುನಾವಣಾ ವೇಳಾಪಟ್ಟಿ ಪ್ರಕಟಿಸಿದೆ.

ಕ್ರಸಂ	ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು	ಸ್ಥಾನ	ಮೀಸಲಾತಿ
1.	**ಕೃಷಿಕರ ಚುನಾವಣಾ ಕ್ಷೇತ್ರಗಳು (11 ಸ್ಥಾನಗಳು)**		
	1.ಬಿದರಕೆರೆ	1	**ಸಾಮಾನ್ಯ**
	2.ದೊಣೆಹಳ್ಳಿ	1	**ಸಾಮಾನ್ಯ**
	3.ಹಿರೇಮಲ್ಲನಹೊಳೆ	1	**ಸಾಮಾನ್ಯ**
	4. ಅಣಬೂರು	1	**ಮಹಿಳೆ**
	5.ಜಗಳೂರು	1	**ಮಹಿಳೆ**
	6.ಹೊಸಕೆರೆ	1	**ಹಿಂದುಳಿದ ವರ್ಗ 'ಅ'**
	7.ಸೊಕ್ಕೆ	1	**ಸಾಮಾನ್ಯ**
	8. ಬಸವನಕೋಟೆ	1	**ಅನುಸೂಚಿತ ಜಾತಿ**
	9.ಪಲ್ಲಾಗಟ್ಟೆ	1	**ಹಿಂದುಳಿದ ವರ್ಗ 'ಬ'**
	10. ಬಿಳಿಚೋಡು	1	**ಸಾಮಾನ್ಯ**
	11.ದೇವಿಕೆರೆ	1	**ಅನುಸೂಚಿತ ಪಂಗಡ**
2.	**ಕಮಿಷನ್ ಏಜೆಂಟರುಗಳು ಮತ್ತು ವ್ಯಾಪಾರಿಗಳು ಚುನಾಯಿಸಿದ ಕ್ಷೇತ್ರ**	**1**	**ಸಾಮಾನ್ಯ**
3.	**ಸಹಕಾರ ಮಾರುಕಟ್ಟೆ ವ್ಯವಹಾರ ಸಂಘಗಳ ಕ್ಷೇತ್ರ**	**1**	**ಸಾಮಾನ್ಯ**

ಚುನಾವಣಾ ವೇಳಾಪಟ್ಟಿ

1	ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ದಿನ	**29–12–2016 (ಗುರುವಾರ)**
2	ನಾಮಪತ್ರಗಳನ್ನು ಪರಿಶೀಲಿಸುವ ದಿನಾಂಕ ಮತ್ತು ದಿನ	**30–12–2016 (ಶುಕ್ರವಾರ)**
3	ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ ಮತ್ತು ದಿನ	**02–01–2017 (ಸೋಮವಾರ)**
4	ಮತದಾನ ಅವಶ್ಯವಿದ್ದರೆ, ಮತದಾನವನ್ನು ನಡೆಸಬೇಕಾದ ದಿನಾಂಕ, ದಿನ ಮತ್ತು ಸಮಯ	**12–01–2017 (ಗುರುವಾರ) ಬೆಳಿಗ್ಗೆ 8–00 ಗಂಟೆಯಿಂದ ಸಂಜೆ 4–00 ಗಂಟೆ ಯವರೆಗೆ**
5	ಮತಗಳ ಎಣಿಕೆ ನಡೆಯುವ ದಿನಾಂಕ ಮತ್ತು ದಿನ	**14–01–2017 (ಶನಿವಾರ) ಬೆಳಿಗ್ಗೆ 8–00 ಗಂಟೆಯಿಂದ**
6	ಚುನಾವಣೆಯನ್ನು ಯಾವ ದಿನಾಂಕಕ್ಕೆ ಮುಂಚೆ ಮುಕ್ತಾಯಗೊಳಿಸಬೇಕೋ ಆ ದಿನಾಂಕ ಮತ್ತು ದಿನ	**16–01–2017 (ಸೋಮವಾರ)**

ಮೇಲ್ಕಂಡ ವೇಳಾಪಟ್ಟಿಯಂತೆ ಕೆಳಕಾಣಿಸಿದ ಸ್ಥಳ ಹಾಗೂ ಸಮಯದಲ್ಲಿ ನಿಗಧಿತ ದಿನಾಂಕಗಳಂದು (ಸಾರ್ವಜನಿಕ ರಜಾ ದಿನ ಹೊರತುಪಡಿಸಿ) ನಾಮಪತ್ರಗಳನ್ನು ಸಲ್ಲಿಸಬಹುದು. ಚುನಾವಣಾ ವೇಳಾಪಟ್ಟಿಯಂತೆ ನಿಯಮಾನುಸಾರ ಚುನಾವಣೆ ಪ್ರಕ್ರಿಯ ಪ್ರಾರಂಭಿಸಲು ಚುನಾವಣಾಧಿಕಾರಿಗಳಿಗೆ ಸೂಚಿಸಿದೆ.

ನಾಮ ಪತ್ರಗಳನ್ನು ಸ್ವೀಕರಿಸುವ ಸ್ಥಳ	**ನಾಮಪತ್ರಗಳನ್ನು ಸಲ್ಲಿಸಲು ನಿಗದಿಪಡಿಸಿದ ಸಮಯ**
ಚುನಾವಣಾಧಿಕಾರಿಗಳು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಜಗಳೂರು ಹಾಗೂ ತಹಶೀಲ್ದಾರ್, ಜಗಳೂರು ಇವರ ಕಾರ್ಯಾಲಯ	**ಬೆಳಿಗ್ಗೆ 11–00 ಗಂಟೆಯಿಂದ ಮಧ್ಯಾಹ್ನ 3–00 ಗಂಟೆಯವರೆಗೆ**

ಡಿ.ಎಸ್.ರಮೇಶ್
ಜಿಲ್ಲಾಧಿಕಾರಿಗಳು,
ದಾವಣಗೆರೆ ಜಿಲ್ಲೆ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 100

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–III	ಬೆಂಗಳೂರು, ಗುರುವಾರ, ಡಿಸೆಂಬರ್ ೨೨, ೨೦೧೬ (ಪುಷ್ಯ ೧, ಶಕ ವರ್ಷ ೧೯೩೮)	ನಂ. ೧೩೮೧
Part–III	Bengaluru, Thursday, December 22, 2016 (Pushya 1, Shaka Varsha 1938)	No. 1381

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ

ಪರಿಷ್ಕೃತ ಚುನಾವಣಾ ನೋಟೀಸು

ನಂ. ಚುನಾವಣೆ.ಸಿ.ಆರ್:50/2016.17, ದಿನಾಂಕ:22.12.2016

ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ ಮತ್ತು ಹಿರಿಯೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಸದಸ್ಯರುಗಳ ಅಧಿಕಾರದ ಅವಧಿಯು ಮುಗಿದಿರುವುದರಿಂದ ತೆರವಾಗಿರುವ ಸದಸ್ಯ ಸ್ಥಾನಗಳಿಗೆ ಚುನಾವಣೆ ನಡೆಸಲು ಈ ಕಾರ್ಯಾಲಯದಿಂದ ಚುನಾವಣಾ ನೋಟೀಸ್ ಸಂಖ್ಯೆ:ಚುನಾವಣೆ.ಸಿ.ಆರ್.50/2016.17 ದಿನಾಂಕ:11.11.2016ರಲ್ಲಿ ಚುನಾವಣಾ ವೇಳಾಪಟ್ಟಿಯನ್ನು ಹೊರಡಿಸಲಾಗಿತ್ತು. ಆದರೆ ಸರ್ಕಾರವು ತಮ್ಮ ಪತ್ರ ಸಂಖ್ಯೆ:ಸಿ175 ಎಂಆರ್‌ಇ 2016(ಭಾಗ) ದಿನಾಂಕ:16.11.2016ರಲ್ಲಿ ಚುನಾವಣೆ ವೇಳಾಪಟ್ಟಿಯನ್ನು ಈ ಕೆಳಕಂಡಂತೆ ಪುನರ್ ನಿಗದಿಪಡಿಸಿಕೊಳ್ಳಲು ಸೂಚಿಸಿರುತ್ತದೆ.

ಪ್ರಯುಕ್ತ ಈ ಕೆಳಕಂಡಂತೆ ಪರಿಷ್ಕೃತ ಚುನಾವಣಾ ವೇಳಾಪಟ್ಟಿಯನ್ನು ಹೊರಡಿಸಲಾಗಿದೆ.

1	ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ದಿನ	:	29.12.2016	(ಗುರುವಾರ)
2	ನಾಮಪತ್ರಗಳನ್ನು ಪರಿಶೀಲಿಸುವ ದಿನಾಂಕ ಮತ್ತು ದಿನ	:	30.12.2016	(ಶುಕ್ರವಾರ)
3	ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ ಮತ್ತು ದಿನ	:	02.01.2017	(ಸೋಮವಾರ)
4	ಮತದಾನ ಅವಶ್ಯವಿದ್ದರೆ, ಮತದಾನವನ್ನು ನಡೆಸಬೇಕಾದ ದಿನಾಂಕ ಮತ್ತು ದಿನ (ಮತದಾನದ ಸಮಯ ಬೆಳಗ್ಗೆ 8.00 ಗಂಟೆಯಿಂದ ಮಧ್ಯಾಹ್ನ 4.00 ಗಂಟೆಯವರೆಗೆ)	:	12.01.2017	(ಗುರುವಾರ)
5	ಮರು ಮತದಾನ ಅವಶ್ಯವಿದ್ದಲ್ಲಿ ನಡೆಸಬೇಕಾದ ದಿನಾಂಕ ಮತ್ತು ದಿನ	:	13.01.2017	(ಶುಕ್ರವಾರ)
6	ಮತ ಎಣಿಕೆ ನಡೆಯುವ ದಿನಾಂಕ ಮತ್ತು ದಿನ ಬೆಳಗ್ಗೆ 8.00 ಗಂಟೆಯಿಂದ	:	14.01.2017	(ಶನಿವಾರ)
7	ಚುನಾವಣೆಯನ್ನು ಯಾವ ದಿನಾಂಕಕ್ಕೆ ಮುಂಚೆ ಮುಕ್ತಾಯಗೊಳಿಸಬೇಕೋ ಆ ದಿನಾಂಕ ಮತ್ತು ದಿನ	:	16.01.2017	(ಸೋಮವಾರ)

ಉಳಿದಂತೆ ದಿನಾಂಕ:11.11.2016ರಂದು ಹೊರಡಿಸಿದ ಚುನಾವಣಾ ನೋಟೀಸ್‌ನಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಎಂ.ಕೆ. ಶ್ರೀರಂಗಯ್ಯ
ಜಿಲ್ಲಾಧಿಕಾರಿಗಳು
ಚಿತ್ರದುರ್ಗ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 50

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–III Part–III	ಬೆಂಗಳೂರು, ಶುಕ್ರವಾರ, ಡಿಸೆಂಬರ್ ೨೩, ೨೦೧೬ (ಪುಷ್ಯ ೨, ಶಕ ವರ್ಷ ೧೯೩೮) Bengaluru, Friday, December 23, 2016 (Pushya 2, Shaka Varsha 1938)	ನಂ. ೧೩೮೪ No. 1384

ಜಿಲ್ಲಾಧಿಕಾರಿಗಳ ಕಾರ್ಯಾಲಯ, ದಾವಣಗೆರೆ ಜಿಲ್ಲೆ, ದಾವಣಗೆರೆ

ಚುನಾವಣಾ ನೋಟೀಸು

ನಂ. ರಾಚು ಸಿಆರ್. 60 /2016–2017, ದಿನಾಂಕ : 22–12–2016

ಸರ್ಕಾರದ ಪತ್ರ ನಂ. ಸಇ 175 ಎಂಆರ್‌ಇ 2016 (ಭಾಗ) ದಿನಾಂಕ 16–11–2016 ರ ನಿರ್ದೇಶನದಂತೆ ಮತ್ತು ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯ ಬೆಂಗಳೂರು ರಿಟ್ ಪಿಟಿಷನ್ ಸಂ.63914–915/2016(ಎಪಿಎಂಸಿ) ದಿ: 16–12–2016ರ ಆದೇಶದಂತೆ ಹಾಗೂ ನಿರ್ದೇಶಕರು ಕೃಷಿ ಮಾರಾಟ ಇಲಾಖೆ ಇವರ ಪತ್ರ ಸಂಖ್ಯೆ ಕೃಮಾಇ 27 ಚುನಾವಣೆ 2016 ದಿನಾಂಕ 22–12–2016 ರ ಸೂಚನೆಯಂತೆ ದಾವಣಗೆರೆ ಜಿಲ್ಲೆಯ ದಾವಣಗೆರೆ ತಾಲ್ಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಸಹಕಾರ ಮಾರುಕಟ್ಟೆ ವ್ಯವಹಾರ ಸಂಘ ಕ್ಷೇತವನ್ನು ಹಾಗೂ ಕೃಷಿ ಸಹಕಾರ ಸಂಸ್ಕರಣ ಸಂಘಗಳ ಕ್ಷೇತ್ರಗಳನ್ನು ಹೊರತುಪಡಿಸಿ ಉಳಿದಂತೆ ಕೆಳಕಾಣಿಸಿದ ಕ್ಷೇತ್ರಗಳಿಂದ ಸದಸ್ಯರನ್ನು ಚುನಾಯಿಸಲು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳು 1968 ರ ನಿಯಮ 7 ರಲ್ಲಿ ಪ್ರದತ್ತವಾದ ಅಧಿಕಾರದ ಅನ್ವಯ ಚುನಾವಣಾ ವೇಳಾಪಟ್ಟಿ ಪ್ರಕಟಿಸಿದೆ.

ಕ್ರಸಂ	ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು	ಸ್ಥಾನ	ಮೀಸಲಾತಿ
1.	**ಕೃಷಿಕರ ಚುನಾವಣಾ ಕ್ಷೇತ್ರಗಳು (11 ಸ್ಥಾನಗಳು)**		
	1. ದಾವಣಗೆರೆ	1	ಸಾಮಾನ್ಯ
	2. ದೊಡ್ಡಬಾತಿ	1	ಸಾಮಾನ್ಯ
	3. ಬೆಳವನೂರು	1	ಸಾಮಾನ್ಯ
	4. ಹದಡಿ	1	ಅನುಸೂಚಿತ ಪಂಗಡ
	5. ಬೇತೂರು	1	ಹಿಂದುಳಿದ ವರ್ಗ "ಬ"
	6. ಮಾಯಕೊಂಡ	1	ಮಹಿಳೆ
	7. ಲೋಕಿಕೆರೆ	1	ಹಿಂದುಳಿದ ವರ್ಗ "ಅ"
	8. ಬಾಡ	1	ಸಾಮಾನ್ಯ
	9. ಆನಗೋಡು	1	ಮಹಿಳೆ
	10. ಐಗೂರು	1	ಅನುಸೂಚಿತ ಜಾತಿ
	11. ಅಣಜಿ	1	ಸಾಮಾನ್ಯ
2.	**ಕಮಿಷನ್ ಏಜೆಂಟರುಗಳು ಮತ್ತು ವ್ಯಾಪಾರಿಗಳು ಚುನಾಯಿಸಿದ ಕ್ಷೇತ್ರ**	**1**	ಸಾಮಾನ್ಯ

ಚುನಾವಣಾ ವೇಳಾಪಟ್ಟಿ

1	ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ದಿನ	**29–12–2016 (ಗುರುವಾರ)**
2	ನಾಮಪತ್ರಗಳನ್ನು ಪರಿಶೀಲಿಸುವ ದಿನಾಂಕ ಮತ್ತು ದಿನ	**30–12–2016 (ಶುಕ್ರವಾರ)**
3	ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ ಮತ್ತು ದಿನ	**02-01–2017 (ಸೋಮವಾರ)**
4	ಮತದಾನ ಅವಶ್ಯವಿದ್ದರೆ, ಮತದಾನವನ್ನು ನಡೆಸಬೇಕಾದ ದಿನಾಂಕ, ದಿನ ಮತ್ತು ಸಮಯ	**12–01–2017 (ಗುರುವಾರ) ಬೆಳಿಗ್ಗೆ 8–00 ಗಂಟೆಯಿಂದ ಸಂಜೆ 4–00 ಗಂಟೆ ಯವರೆಗೆ**
5	ಮತಗಳ ಎಣಿಕೆ ನಡೆಯುವ ದಿನಾಂಕ, ದಿನ ಮತ್ತು ಸಮಯ	**14–01–2017 (ಶನಿವಾರ) ಬೆಳಿಗ್ಗೆ 8–00 ಗಂಟೆಯಿಂದ**
6	ಚುನಾವಣೆಯನ್ನು ಯಾವ ದಿನಾಂಕಕ್ಕೆ ಮುಂಚೆ ಮುಕ್ತಾಯಗೊಳಿಸಬೇಕೋ ಆ ದಿನಾಂಕ ಮತ್ತು ದಿನ	**16–01–2017 (ಸೋಮವಾರ)**

ಮೇಲ್ಕಂಡ ವೇಳಾಪಟ್ಟಿಯಂತೆ ಕೆಳಕಾಣಿಸಿದ ಸ್ಥಳ ಹಾಗೂ ಸಮಯದಲ್ಲಿ ನಿಗಧಿತ ದಿನಾಂಕಗಳಂದು (ಸಾರ್ವಜನಿಕ ರಜಾ ದಿನ ಹೊರತುಪಡಿಸಿ) ನಾಮಪತ್ರಗಳನ್ನು ಸಲ್ಲಿಸಬಹುದು. ಚುನಾವಣಾ ವೇಳಾಪಟ್ಟಿಯಂತೆ ನಿಯಮಾನುಸಾರ ಚುನಾವಣೆ ಪ್ರಕ್ರಿಯ ಪ್ರಾರಂಭಿಸಲು ಚುನಾವಣಾಧಿಕಾರಿಗಳಿಗೆ ಸೂಚಿಸಿದೆ.

ನಾಮ ಪತ್ರಗಳನ್ನು ಸ್ವೀಕರಿಸುವ ಸ್ಥಳ	**ನಾಮಪತ್ರಗಳನ್ನು ಸಲ್ಲಿಸಲು ನಿಗದಿಪಡಿಸಿದ ಸಮಯ**
ಚುನಾವಣಾಧಿಕಾರಿಗಳು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದಾವಣಗೆರೆ ಹಾಗೂ ತಹಶೀಲ್ದಾರ್, ದಾವಣಗೆರೆ ಇವರ ಕಾರ್ಯಾಲಯ	**ಬೆಳಿಗ್ಗೆ 11–00 ಗಂಟೆಯಿಂದ ಮಧ್ಯಾಹ್ನ 3–00 ಗಂಟೆಯವರೆಗೆ**

ಡಿ.ಎಸ್.ರಮೇಶ್
ಜಿಲ್ಲಾಧಿಕಾರಿ,
ದಾವಣಗೆರೆ ಜಿಲ್ಲೆ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 100

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ-*IVA*	ಬೆಂಗಳೂರು, ಬುಧವಾರ, ನವೆಂಬರ್ ೩೦, ೨೦೧೬ (ಮಾರ್ಗಶಿರ ೯, ಶಕ ವರ್ಷ ೧೯೩೮)	ನಂ. ೧೩೧೫
Part–IVA	***Bengaluru, Wednesday, November 30, 2016 (Margashira 9, Shaka Varsha 1938)***	***No. 1315***

KARNATAKA LEGISLATIVE ASSEMBLY SECRETARIAT

NOTIFICATION

No. KLA/LGA/37/Bill/2016, Bengaluru, Dated: 30.11.2016

This following Bill was introduced in Legislative Assembly on 30.11.2016

ಕರ್ನಾಟಕ ವಿಧಾನಸಭೆ

ಹದಿನಾಲ್ಕನೇ ವಿಧಾನಸಭೆ

ಹನ್ನೆರಡನೇ ಅಧಿವೇಶನ

ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 2016

(2016ರ ವಿಧಾನಸಭೆಯ ವಿಧೇಯಕ ಸಂಖ್ಯೆ–37)

ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ನ್ನು (1962ರ ಕರ್ನಾಟಕ ಅಧಿನಿಯಮ 10) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:– (1) ಈ ಅಧಿನಿಯಮವನ್ನು ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. 38ಎ ಹೊಸ ಪ್ರಕರಣದ ಸೇರ್ಪಡೆ.– ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರಲ್ಲಿ (1962ರ ಕರ್ನಾಟಕ ಅಧಿನಿಯಮ 10) 38ನೇ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"38ಎ. **ಕೃಷಿ ಕಾರ್ಮಿಕರಿಗೆ ಮಾಲಿಕತ್ವ ಪ್ರಮಾಣಪತ್ರವನ್ನು ನೀಡುವುದು.–** (1) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, 1979ರ ಜನವರಿ ಮೊದಲ ದಿನಕ್ಕೆ ನಿಕಟಪೂರ್ವದಲ್ಲಿ ಯಾವೊಬ್ಬ ಕೃಷಿ ಕಾರ್ಮಿಕನು, ಯಾವುದೇ ಗ್ರಾಮದಲ್ಲಿ ತನಗೆ ಸೇರಿರದ ಭೂಮಿಯಲ್ಲಿರುವ ವಾಸದ ಮನೆಯಲ್ಲಿ ಸಾಮಾನ್ಯವಾಗಿ ವಾಸಿಸುತ್ತಿರುವಲ್ಲಿ, ಅಂಥ ವಾಸದ ಮನೆಯನ್ನು, ಅದು ಇರುವ ನಿವೇಶನದ ಸಹಿತವಾಗಿ ಮತ್ತು ಅದಕ್ಕೆ ನಿಕಟವಾಗಿ ತಾಗಿಕೊಂಡಿರುವ ಹಾಗೂ ಅದರ ಅನುಭೋಗಕ್ಕೆ ಅವಶ್ಯಕವಾಗಿರುವ ಭೂಮಿಯು ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 2016ರ ಪ್ರಾರಂಭದ ದಿನಾಂಕದಂದು, ಎಲ್ಲಾ ಉಪಾಧಿಗಳಿಂದ ಮುಕ್ತವಾಗಿ ರಾಜ್ಯ ಸರ್ಕಾರದಲ್ಲಿ ನಿರುಪಾಧಿಕವಾಗಿ ನಿಹಿತಗೊಳ್ಳತಕ್ಕದ್ದು ಮತ್ತು ಕೃಷಿ ಕಾರ್ಮಿಕನು ಅದರ ಮಾಲೀಕನಾಗಿ ನೋಂದಾಯಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

ವಿವರಣೆ:–ಈ ಪ್ರಕರಣದ ಉದ್ದೇಶಕ್ಕಾಗಿ, ಮಾಲೀಕನ ಮನೆಯ ಭಾಗವಾಗಿರುವ ಅಥವಾ ಅಂಥ ಭೂಮಿಯಲ್ಲಿ ತಾತ್ಕಾಲಿಕ ನಿವಾಸವಾಗಿರುವ ವಾಸದ ಮನೆಯಲ್ಲಿ ವಾಸಿಸುತ್ತಿರುವ ಕೃಷಿ ಕಾರ್ಮಿಕನನ್ನು ಅದರಲ್ಲಿ ಸಾಮಾನ್ಯವಾಗಿ ವಾಸಿಸುತ್ತಿದ್ದಾನೆಂದು ಪರಿಗಣಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಮಾಲೀಕನೆಂದು ನೋಂದಾಯಿತನಾಗಲು ಹಕ್ಕುಳ್ಳವನಾಗಿರುವ ಪ್ರತಿಯೊಬ್ಬ ಕೃಷಿ ಕಾರ್ಮಿಕನು, ಸಹಾಯಕ ಆಯುಕ್ತರಿಗೆ ಅಥವಾ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಯಾವೊಬ್ಬ ಇತರ ಅಧಿಕಾರಿಗೆ, ನಿಯಮಿಸಿದ ರೀತಿಯಲ್ಲಿ, ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 2016ರ ಪ್ರಾರಂಭದ ದಿನಾಂಕದಿಂದ ಒಂದು ವರ್ಷ ಪೂರ್ಣಗೊಳ್ಳುವ ದಿನದಂದು ಅಥವಾ ಅದಕ್ಕೆ ಮೊದಲು ಒಂದು ಅರ್ಜಿಯನ್ನು ಸಲ್ಲಿಸಬಹುದು ಮತ್ತು ನಿಯಮಿಸಬಹುದಾದ ಅಂಥ ವಿಚಾರಣೆಯ ತರುವಾಯ, ಸಹಾಯಕ ಆಯುಕ್ತನು ಅಥವಾ ಅಧಿಕೃತ ಅಧಿಕಾರಿಯು, ಆದೇಶದ ಮೂಲಕ, ಮಾಲೀಕನೆಂದು ನೋಂದಾಯಿಸಿಕೊಳ್ಳಲು ಅರ್ಹನಾದ ವ್ಯಕ್ತಿಯನ್ನು ಮತ್ತು ಆತನು ಹಾಗೆ ನೋಂದಾಯಿತನಾಗಲು ಅರ್ಹನಾಗಿರುವ ವ್ಯಕ್ತಿಯ ಸಂಬಂಧದಲ್ಲಿನ ಭೂಮಿಯನ್ನು ಹಾಗೂ ನಿಯಮಿಸಬಹುದಾದ ಅಂಥ ಇತರ ವಿಷಯಗಳನ್ನು ಕುರಿತು ನಿರ್ಧರಿಸತಕ್ಕದ್ದು ಮತ್ತು ಆದೇಶದ ಪ್ರತಿಯನ್ನು ತಹಸೀಲ್ದಾರನಿಗೆ ಕಳುಹಿಸತಕ್ಕದ್ದು.

(3) ತಹಸೀಲ್ದಾರನು, (2)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಿದ ಆದೇಶವನ್ನು ಸ್ವೀಕರಿಸಿದ ಮೇಲೆ 47ನೇ ಪ್ರಕರಣದ (1) ಮತ್ತು (2)ನೇ ಉಪಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ನಿರ್ಧರಿಸಿದ ಮೊತ್ತವನ್ನು ಕೃಷಿ ಕಾರ್ಮಿಕನು ಸರ್ಕಾರಕ್ಕೆ ಸಂದಾಯ ಮಾಡಿದ ಮೇಲೆ ಅಂಥ ಭೂಮಿಯಲ್ಲಿನ ತನ್ನ ಹಕ್ಕುಗಳನ್ನು ರದ್ದುಗೊಳಿಸುವುದಕ್ಕಾಗಿ ಭೂ ಮಾಲೀಕನು ಹಕ್ಕುಳ್ಳವನಾಗಿರತಕ್ಕ ಮೊತ್ತವನ್ನು ನಿರ್ಧರಿಸತಕ್ಕದ್ದು. ತಹಸೀಲ್ದಾರನು, ಅಂಥ ವಾಸದ ಮನೆ ಮತ್ತು ಭೂಮಿಗೆ ಸಂಬಂಧಿಸಿದಂತೆ ನಿಯಮಿಸಬಹುದಾದ ಅಂಥ ಇತರ ವಿವರಗಳನ್ನು ಮತ್ತು ವ್ಯಾಪ್ತಿಯನ್ನು ಹಾಗೂ ಆತನು ಅದರ ಮಾಲೀಕನೆಂದು ನೋಂದಾಯಿಸಲಾಗಿದೆ ಎಂದು ನಿರ್ದಿಷ್ಟಪಡಿಸಿ, ಈ ಪರಿಣಾಮವಾಗಿ ಒಂದು ಅಧಿಸೂಚನೆಯನ್ನು ಹೊರಡಿಸತಕ್ಕದ್ದು ಮತ್ತು ಅಂಥ ಕೃಷಿ ಕಾರ್ಮಿಕನಿಗೆ ಪ್ರಮಾಣಪತ್ರವನ್ನೂ ಸಹ ನೀಡತಕ್ಕದ್ದು. ಪ್ರಮಾಣಪತ್ರದ ಒಂದು ಪ್ರತಿಯನ್ನು ತಹಸೀಲ್ದಾರನು ಉಪ–ನೋಂದಣಾಧಿಕಾರಿಗೆ ಕಳುಹಿಸಿತಕ್ಕದ್ದು, ಆತನು, ನೋಂದಣಿ ಅಧಿನಿಯಮ, 1908ರಲ್ಲಿ (1908ರ ಕೇಂದ್ರ ಅಧಿನಿಯಮ 16) ಏನೇ ಇದ್ದರೂ, ಅದನ್ನು ನೋಂದಾಯಿಸತಕ್ಕದ್ದು. ಕೃಷಿ ಕಾರ್ಮಿಕನು ಇರಸಾಲು ಮಾಡಿದ ಮೊತ್ತವನ್ನು ಭೂ ಮಾಲೀಕನಿಗೆ ಒಂದೇ ಮೊತ್ತದಲ್ಲಿ ನಗದು ರೂಪದಲ್ಲಿ ಸಂದಾಯ ಮಾಡತಕ್ಕದ್ದು.

(4) 38ನೇ ಪ್ರಕರಣದ (2) ಮತ್ತು (3)ನೇ ಉಪಪ್ರಕರಣಗಳ ಉಪಬಂಧಗಳನ್ನು, ಸಾಧ್ಯವಿರುವಷ್ಟರಮಟ್ಟಿಗೆ ಅನ್ವಯಿಸತಕ್ಕದ್ದು ಮತ್ತು "ನ್ಯಾಯಾಧಿಕರಣ"ಕ್ಕೆ ಕಳುಹಿಸಿರುವುದನ್ನು, ಸಹಾಯಕ ಆಯುಕ್ತ ಅಥವಾ ಅಧಿಕೃತ ಅಧಿಕಾರಿಗೆ ಕಳುಹಿಸಲಾಗಿದೆ ಎಂಬಂತೆ ಅರ್ಥೈಸತಕ್ಕದ್ದು.

(5) 61ನೇ ಪ್ರಕರಣದ ಉಪಬಂಧಗಳನ್ನು ಬಾಡಿಗೆದಾರನು ಅಧಿಭೋಗದಾರನಾಗಿ ನೋಂದಾಯಿಸಿದ ಭೂಮಿಯ ಸಂಬಂಧದಲ್ಲಿ ಅನ್ವಯಿಸುವಂತೆಯೇ ಈ ಪ್ರಕರಣದ ಅಡಿಯಲ್ಲಿ ಕೃಷಿ ಕಾರ್ಮಿಕನಿಗೆ ಮಂಜೂರಾದ ವಾಸದ ಮನೆ ಅಥವಾ ನಿವೇಶನಕ್ಕೂ ಅನ್ವಯಿಸತಕ್ಕದ್ದು."

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕೃಷಿ ಕಾರ್ಮಿಕನು 1979ರ ಜನವರಿ 1ನೇ ದಿನಕ್ಕೂ ನಿಕಟಪೂರ್ವದಲ್ಲಿ ಆತನಿಗೆ ಸೇರದಿರುವ ಭೂಮಿಯ ಮೇಲೆ ಕಟ್ಟಿದ ವಾಸದ ಮನೆಗೆ ಸಂಬಂಧಿಸಿದಂತೆ, ಮಾಲೀಕನಾಗಿ ನೋಂದಣಿಗೆ ಹಕ್ಕುಳ್ಳವನಾಗಲು ಅಂಥ ಭೂಮಿಯನ್ನು ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 2016 ಪ್ರಾರಂಭವಾದ ದಿನಾಂಕದಿಂದ ಸರ್ಕಾರದಲ್ಲಿ ನಿಹಿತವಾಗುವುದಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಆನುಷಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸಲು ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ 1961ನ್ನು (1962ರ ಕರ್ನಾಟಕ ಅಧಿನಿಯಮ 10) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತ ಜ್ಞಾಪನ ಪತ್ರ

ಖಂಡ 02	ಸೇರಿಸಲು ಉದ್ದೇಶಿಸಿರುವ 38ಎ ಪ್ರಕರಣದ,– (i) (2)ನೇ ಉಪಪ್ರಕರಣವು ಕೃಷಿ ಕಾರ್ಮಿಕನು ಅರ್ಜಿಯನ್ನು ಸಲ್ಲಿಸುವ ವಿಧಾನ, ಸಹಾಯಕ ಆಯುಕ್ತ ಅಥವಾ ಅಧಿಕೃತ ಅಧಿಕಾರಿಯು ಕೃಷಿ ಕಾರ್ಮಿಕನ ವಾಸದ ಮನೆಯ ಮಾಲೀಕತ್ವ ಮತ್ತು ಹಕ್ಕಿನ ಬಗ್ಗೆ ವಿಚಾರಣೆಯನ್ನು ನಡೆಸುವ ವಿಧಾನದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. (ii) (3)ನೇ ಉಪಪ್ರಕರಣವು ಕೃಷಿ ಕಾರ್ಮಿಕನಿಗೆ ನೀಡುವ ಪ್ರಮಾಣ ಪತ್ರದಲ್ಲಿ ನಿರ್ದಿಷ್ಟಪಡಿಸಲು ಅಗತ್ಯವಾಗಿ ಬೇಕಾದ ವಾಸದ ಮನೆಯ ಮತ್ತು ಭೂಮಿಯ ವ್ಯಾಪ್ತಿ ಮತ್ತು ಇತರ ವಿವರಗಳ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

ಕಾಗೋಡು ತಿಮ್ಮಪ್ಪ
ಕಂದಾಯ ಮಂತ್ರಿಗಳು.

ಎಸ್. ಮೂರ್ತಿ
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY
FOURTEENTH LEGISLATIVE ASSEMBLY
TWELFTH SESSION

THE KARNATAKA LAND REFORMS (AMENDMENT) BILL, 2016

(L.A. Bill No. 37 of 2016)

A Bill further to amend the Karnataka Land Reforms Act, 1961.

Whereas it is expedient further to amend the Karnataka Land Reforms Act, 1961 (Karnataka Act 10 of 1962) for the purposes hereinafter appearing.

Be it enacted by the Karnataka State Legislature in the sixty-seventh year of the Republic of India, as follows:-

1. Short title and commencement.- (1) This Act may be called the Karnataka Land Reforms (Amendment) Act, 2016.

(2) It shall come into force on such date as the State Government may by notification appoint.

2. Insertion of new section 38A.- In the Karnataka Land Reforms Act, 1961 (Karnataka Act 10 of 1962), after section 38, the following shall be inserted, namely:-

"**38A. Grant of certificate of ownership to an agricultural labourer.-** (1) Notwithstanding anything contained in this Act or any other law for the time being in force, where in any village, agricultural labourer is ordinarily residing in a dwelling house on a land not belonging to him immediately prior to first day of January 1979, such dwelling house alongwith the site thereof and land immediately appurtenant thereto and necessary for its enjoyment shall, on the date of commencement of the Karnataka Land Reforms (Amendment) Act, 2016 vest absolutely in the State Government, free from all encumbrances and the agricultural labourer shall be entitled to be registered as owner thereof.

Explanation.- For the purpose of this section an agricultural labourer residing in a dwelling house which is a portion of the house of the owner or which is a temporary residence on such land shall not be regarded as ordinary residing therein.

(2) Every agricultural labourer entitled to be registered as a owner under sub-section (1) may make an application to the Assistant Commissioner or any other officer authorized by the State

Government, in the prescribed manner on or before completion of one year from the date of commencement of the Karnataka Land Reforms (Amendment) Act, 2016 and the Assistant Commissioner or the officer authorized, shall after such enquiry as may be prescribed, by order, determine the person entitled to be registered as owner and the dwelling house and land in respect of which he is entitled to be so registered and such other matters as may be prescribed and forward a copy of the Order to the Tahasildar.

(3) The Tahasildar shall, on receipt of the order passed under sub-section(2) determine in the manner specified in sub-sections (1) and (2) of section 47, the amount of the land owner shall be entitled to, for the extinguishment of his rights in such land on payment of the amount determined, to the Government, by the agricultural labourer, the Tahasildar shall issue a notification to this effect and also issue a certificate to such labourer specifying the extent and such other particulars as may be prescribed relating to such dwelling house and land and that he shall be registered as owner thereof. A copy of the certificate shall be forwarded by the Tahasildar to the sub-registrar who shall, notwithstanding anything contained in the Registration Act, 1908 (Central Act 16 of 1908) register the same. The owner of the land shall be paid the amount remitted by the agricultural labourer in cash in a lump sum.

(4) The provisions of sub-sections (2) and (3) of section 38 shall, so as may be, apply and the reference to "Tribunal" shall be construed as being reference to Assistant commissioner or officer authorized.

(5) The provisions of section 61 shall apply to a dwelling house or site granted under this section to an agricultural labourer as they apply to a land in respect of which a tenant has been registered as an occupant."

STATEMENT OF OBJECTS AND REASONS

It is considered necessary to amend the Karnataka Land Reforms Act, 1961 (Karnataka Act 10 of 1962), to provide for an agricultural labourer to be entitled for registration as owner in respect of dwelling house built on land not belonging to him immediately prior to 1st day of January 1979, by vesting such Land in Government on the date of commencement of the Karnataka Land Reforms (Amendment) Act, 2016 and matters connected therewith or incidental thereto.

Hence the Bill,

FINANCIAL MEMORANDUM

There is no extra expenditure involved in the proposed Legislative measure.

MEMORANDUM REGARDING DELEGATED LEGISLATION

Clause 2	Section 38A proposed to be inserted:- (i) Sub-section(2), empowers the State Government to make rules regarding the manner of making application by the agricultural labourer, manner of holding enquiry by the Assistant Commissioner or the officer authorized regarding ownership and entitlement of dwelling house by the agricultural labourer; (ii) Sub-section(3), empowers the State Government to make rules regarding the extent and other particulars of dwelling house and land that are required to be specified in the certificate issued to the agricultural labourer.

The proposed delegation of legislative power is normal in Character.

KAGODU TIMMAPPA
Minister for Revenue.

S.Murthy
Secretary (I/C)
Karnataka Legislative Assembly.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಡಿ7) ಪ್ರತಿಗಳು:-50

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA	ಬೆಂಗಳೂರು, ಬುಧವಾರ, ನವೆಂಬರ್ ೩೦, ೨೦೧೬ (ಮಾರ್ಗಶಿರ ೯, ಶಕ ವರ್ಷ ೧೯೩೮)	ನಂ. ೧೩೧೬
Part–IVA	Bengaluru, Wednesday, November 30, 2016 (Margashira 9, Shaka Varsha 1938)	No. 1316

KARNATAKA LEGISLATIVE ASSEMBLY SECRETARIAT

NOTIFICATION

No. KLA/LGA/38/Bill/2016, Bengaluru, Dated: 30.11.2016

This following Bill was introduced in Legislative Assembly on 30.11.2016

ಕರ್ನಾಟಕ ವಿಧಾನಸಭೆ

ಹದಿನಾಲ್ಕನೇ ವಿಧಾನಸಭೆ

ಹನ್ನೆರಡನೇ ಅಧಿವೇಶನ

ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕ, 2016

(2016ರ ವಿಧಾನಸಭೆಯ ವಿಧೇಯಕ ಸಂಖ್ಯೆ–38)

ಕರ್ನಾಟಕ ಅಬಕಾರಿ ಅಧಿನಿಯಮ, 1965ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಅಬಕಾರಿ ಅಧಿನಿಯಮ, 1965ನ್ನು (1966ರ ಕರ್ನಾಟಕ ಅಧಿನಿಯಮ 21) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ಅಬಕಾರಿ (ತಿದ್ದುಪಡಿ) ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 2ನೇ ಪ್ರಕರಣದ ತಿದ್ದುಪಡಿ.– ಕರ್ನಾಟಕ ಅಬಕಾರಿ ಅಧಿನಿಯಮ, 1965ರ (1966ರ ಕರ್ನಾಟಕ ಅಧಿನಿಯಮ 21) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ,–

(i) (27)ನೇ ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(27) "ಹೆಂಡ" ಎಂದರೆ, ಅಬಕಾರಿ ಮರದಿಂದ ತೆಗೆಯಲಾದ, ಆದರೆ ನೀರಾವನ್ನು ಒಳಗೊಳ್ಳದಿರುವ ಹುಳಿಹಿಡಿದ (fermented) ರಸ."

(ii) (27)ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(27ಎ) "ನೀರಾ" ಎಂದರೆ, ತೆಂಗಿನ ಮರದಿಂದ ತೆಗೆಯಲಾದ ಮತ್ತು ಯಾವುದೇ ವಿಧಾನದಲ್ಲಿ ಪಾತ್ರೆಗಳಲ್ಲಿ ಸಂಗ್ರಹಿಸಿರುವ ಹಾಗೂ ಹುಳಿಹಿಡಿಯದಿರುವ ಪಾರದರ್ಶಕ, ಪಾಕಯುತವಾದ, ವಾಸನೆ ಮತ್ತು ರುಚಿಯಲ್ಲಿ ಸಿಹಿಯಾಗಿರುವ, ತನ್ನ ಮೇಲ್ಪದರದಲ್ಲಿ ತೆಳು ನೊರೆಯನ್ನೂ ಹೊಂದದಿರುವ ಮತ್ತು ಯಾವುದೇ ಆಮ್ಲದೊಂದಿಗೆ ಸಂರಕ್ಷಿಸದೇ ಇರುವ ರಸ."

3. 13ಎ ಹೊಸ ಪ್ರಕರಣದ ಸೇರ್ಪಡೆ.– ಮೂಲ ಅಧಿನಿಯಮದ 13ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"**13ಎ. ಲೈಸೆನ್ಸನ್ನು ಪಡೆಯದ ಹೊರತು ನೀರಾ ಮತ್ತು ನೀರಾ ಉತ್ಪನ್ನಗಳ ಉತ್ಪಾದನೆ ಇತ್ಯಾದಿಯ ನಿಷೇಧ.–** ನಿಯಮಿಸಬಹುದಾದ ಅಂಥ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಹಾಗೂ ಸಕ್ಷಮ ಪ್ರಾಧಿಕಾರಿಯ ಮೂಲಕ

ಮಂಜೂರಾದ ಲೈಸನ್ಸನ್ನು ಪಡೆಯದ ಹೊರತು ಅಥವಾ ಅಂಥ ಫೀಜನ್ನು ಪಾವತಿಸದ ಹೊರತು, ಯಾವೊಬ್ಬ ವ್ಯಕ್ತಿಯು ತೆಂಗಿನ ಮರದಿಂದ ನೀರಾವನ್ನು ಇಳಿಸತಕ್ಕದ್ದಲ್ಲ ಅಥವಾ ಸಂಸ್ಕರಿಸತಕ್ಕದ್ದಲ್ಲ."

4. 32ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 32ನೇ ಪ್ರಕರಣದ (3)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(4) 13ಎ ಪ್ರಕರಣದ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸುವವನು ಅಪರಾಧ ನಿರ್ಣೀತವಾದ ಮೇಲೆ ಮೊದಲ ಐದು ಅಪರಾಧಗಳವರೆಗೆ ಪ್ರತಿ ಸಲವೂ ಐದು ಸಾವಿರ ರೂಪಾಯಿಗಳ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು. ತರುವಾಯದ ಅಪರಾಧದ ಸಂದರ್ಭದಲ್ಲಿ, ಆತನು ಆರು ತಿಂಗಳ ಅವಧಿಯ ಕಾರಾವಾಸದೊಂದಿಗೆ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು."

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಸನ್ಮಾನ್ಯ ಮುಖ್ಯಮಂತ್ರಿಯವರು 2015–16ರ ಆಯವ್ಯಯ ಭಾಷಣದಲ್ಲಿ, ತೆಂಗಿನ ಮರಗಳಿಂದ ಮಿತ ಪ್ರಮಾಣದಲ್ಲಿ "ನೀರಾ"ವನ್ನು ತೆಗೆಯಲು ತೆಂಗು ಬೆಳೆಗಾರರ ಸಂಯುಕ್ತ ಸಂಘದ ಸದಸ್ಯರಿಗೆ ಅನುಮತಿ ನೀಡಲು ಮತ್ತು ಅದರಿಂದಾಗಿ ತೆಂಗು ಬೆಳೆಗಾರರ ಆದಾಯದಲ್ಲಿ ಪ್ರಮುಖ ಹೆಚ್ಚಳವನ್ನು ತರಲು, ಅಬಕಾರಿ ಅಧಿನಿಯಮಕ್ಕೆ ತಿದ್ದುಪಡಿಯನ್ನು ಪ್ರಸ್ತಾವಿಸಿದ್ದರು. ಕೇರಳ, ತಮಿಳುನಾಡು, ಮಹಾರಾಷ್ಟ್ರ, ಗೋವಾ ಇಂಥ ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಾದ ಲಕ್ಷದ್ವೀಪ ಮತ್ತು ಅಂಡಮಾನ್ ನಿಕೋಬಾರ್ ದ್ವೀಪಗಳಲ್ಲಿ ನೀರಾ ಉತ್ಪಾದನೆಯನ್ನು ಕಾನೂನಾತ್ಮಕವಾಗಿ ಅನುಮತಿಸಲಾಗಿದೆ.

ಆದ್ದರಿಂದ, ಕರ್ನಾಟಕ ಅಬಕಾರಿ ಅಧಿನಿಯಮ, 1965ನ್ನು ಈ ಮುಂದಿನವುಗಳಿಗಾಗಿ ತಿದ್ದುಪಡಿ ಮಾಡುವುದು, ಅವಶ್ಯವೆಂದು ಪರಿಗಣಿಸಲಾಗಿದೆ, ಎಂದರೆ:–

(i) "ಹೆಂಡ" ಪರಿಭಾಷೆಯಿಂದ "ಹುಳಿ ಹಿಡಿಯದ ರಸ" ಪದವನ್ನು ತೆಗೆದು ಹಾಕುವುದು ಮತ್ತು "ನೀರಾ"ವನ್ನು "ಹೆಂಡ"ದಿಂದ ಪ್ರತ್ಯೇಕಿಸುವುದು;

(ii) "ನೀರಾ" ಪದವನ್ನು ಪರಿಭಾಷಿಸುವುದು;

(iii) ನೀರಾ ತೆಗೆಯುವುದನ್ನು ಮತ್ತು ನೀರಾ ಉತ್ಪನ್ನಗಳನ್ನು ತಯಾರಿಸುವುದನ್ನು ನಿಯಂತ್ರಿಸುವುದು; ಮತ್ತು

(iv) 13ಎ ಮತ್ತು ಅದರಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳ ಉಲ್ಲಂಘನೆಗೆ ದಂಡನೆಯನ್ನು ಕಲ್ಪಿಸುವುದು.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತ ಜ್ಞಾಪನ ಪತ್ರ

ಖಂಡ 3	3ನೇ ಖಂಡದ ಮೂಲಕ ಸೇರಿಸಲು ಉದ್ದೇಶಿಸಲಾದ 13ಎ ಉಪಪ್ರಕರಣವು, ತೆಂಗಿನ ಮರದಿಂದ ನೀರಾವನ್ನು ಇಳಿಸಲು ಲೈಸೆನ್ಸ್ ನೀಡಲು ಫೀಜನ್ನು ನಿಗದಿಗೊಳಿಸಲು ಮತ್ತು ನಿಬಂಧನೆಗಳು ಹಾಗೂ ಷರತ್ತುಗಳ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

ಹೆಚ್. ವೈ ಮೇಟಿ
ಅಬಕಾರಿ ಮಂತ್ರಿಗಳು.

ಎಸ್. ಮೂರ್ತಿ
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನಸಭೆ.

ಅನುಬಂಧ
ಕರ್ನಾಟಕ ಅಬಕಾರಿ ಅಧಿನಿಯಮ 1965ರ
(1966ರ ಕರ್ನಾಟಕ ಅಧಿನಿಯಮ ಸಂಖ್ಯೆ 21) ಉದ್ಧೃತ ಭಾಗ

Xxx xxx xxx

2. ಪರಿಭಾಷೆಗಳು: Xxx xxx xxx

(27) **"ಹೆಂಡ"** ಎಂದರೆ ಅಬ್ಕಾರಿ ಮರದಿಂದ ತೆಗೆಯಲಾದ ಹುಳಿ ಹಿಡಿದ ಅಥವಾ ಹಿಡಿಯದ ರಸ.

Xxx xxx xxx

KARNATAKA LEGISLATIVE ASSEMBLY
FOURTEENTH LEGISLATIVE ASSEMBLY
TWELFTH SESSION

THE KARNATAKA EXCISE (AMENDMENT) BILL, 2016

(L.A. Bill No. 38 of 2016)

A Bill further to amend the Karnataka Excise Act, 1965.

Whereas it is expedient further to amend the Karnataka Excise Act, 1965 (Karnataka Act 21 of 1966) for the purposes hereinafter appearing;

Be it enacted by the Karnataka State Legislature in the sixty-seventh year of the Republic of India, as follows.-

1. Short title and commencement.- (1) This Act may be called the Karnataka Excise (Amendment) Act, 2016.

(2) It shall come into force at once.

2. Amendment of section 2.- In the Karnataka Excise Act, 1965 (Karnataka Act 21 of 1966) (hereinafter referred to as the principal Act), in section 2,-

(i) for clause (27), the following shall be substituted, namely:-

"(27) "Toddy" means fermented juice drawn from an excise tree but does not include Neera."

(ii) after clause (27), the following shall be inserted, namely:-

"(27-A) "Neera" means the juice drawn from a coconut tree and collected in receptacles in any manner and not subjected to fermentation, which is transparent, syrupy, sweet in smell and taste, without the slightest foam on its surface and preserved without any acid."

3. Insertion of new section 13-A.- After section 13 of the principal Act, the following shall be inserted, namely:-

"13A. Manufacture etc., of Neera and Neera Products prohibited except under a licence.- No person shall tap Neera from coconut tree or further process it, except with a licence granted by the competent authority or payment of such fee and subject to such terms and conditions as may be prescribed.

4. Amendment of section 32.- In section 32 of the principal Act, after sub-section (3), the following shall be inserted, namely:-

"(4) Whoever violates the provisions of section 13A or the rules made thereunder shall on conviction be punished with a fine of rupees five thousand for each time, upto first five offences. In case of subsequent offence, he shall be punished with an imprisonment for a term of six months or with fine which may extend to ten thousand rupees or with both."

STATEMENT OF OBJECTS AND REASONS

In the Budget Speech 2015-16, the Hon'ble Chief Minister, proposed to bring amendment to the Excise Act to permit members of Coconut Growers Federation to harvest 'Neera' in limited quantities from the coconut trees and thereby increasing the income of the coconut growers

significantly. Further, Neera production is legally permitted in the States like Kerala, Tamil Nadu, Maharashtra, Goa and Union Territories of Lakshadweep and Andaman and Nicobar Islands.

Therefore, it is considered necessary to amend the Karnataka Excise Act, 1965 to,-

(i) remove the term “unfermented juice” from the definition of “Toddy” and to distinguish “Neera” from “Toddy”;

(ii) define the term “Neera”;

(iii) regulate tapping of Neera and manufacture of Neera products; and

(iv) provide punishment for violation of provisions of section 13A and the rules made thereunder.

Hence, the Bill.

FINANCIAL MEMORANDUM

There is no extra expenditure involved in the proposed legislative measure.

MEMORANDUM REGARDING DELEGATED LEGISLATION

Clause 3: Section 13A proposed to be inserted by clause 3, empowers the State Government to make rules regarding determination of fee and terms and conditions of licence to tap Neera from coconut tree.

The proposed delegation of legislative power is normal in character.

H.Y.METI
Minister for Excise

S.Murthy
Secretary (I/C)
Karnataka Legislative Assembly.

ANNEXURE
EXTRACT FROM THE KARNATAKA EXCISE ACT,1965
(KARNATAKA ACT 21 OF 1966)

XX XX XX

2. Definitions. - XX XX XX

(27) " toddy" means fermented or unfermented juice drawn from an excise tree ;

XX XX XX

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಔ7) ಪ್ರತಿಗಳು:-50

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–**IVA**	ಬೆಂಗಳೂರು, ಗುರುವಾರ, ಡಿಸೆಂಬರ್ ೧, ೨೦೧೬ (ಮಾರ್ಗಶಿರ ೧೦, ಶಕ ವರ್ಷ ೧೯೩೮)	ಸಂ. ೧೩೧೭
Part–IVA	**Bengaluru, Thursday, December 1, 2016 (Margashira 10, Shaka Varsha 1938)**	**No. 1317**

FOREST, ENVIRONMENT & ECOLOGY SECRETARIAT

NOTIFICATION

NO. FEE 193 FDP 2016 BENGALURU, DATED: 30.11.2016.

In exercise of the powers conferred by section 15A of Karnataka Preservation of Trees Act, 1976 (Karnataka Act 76 of 1976) the Government of Karnataka hereby specify that Tree officers appointed under sub-section (1) of section 5 of the said Act may exercise powers conferred upon him within his Jurisdiction with such powers of an officer in-charge of Police Station by the provisions of the Code of Criminal Procedure, 1973 (Central Act 2 of 1974) regards offences under section 22 of the said Act within their specified defined jurisdiction.

By order and in the name of Governor of Karnataka

H.S.Bhagyalakshmi
Under Secretary to Government,
Forest, Environment & Ecology Department.
(Forest-B)

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 50

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ-IVA	ಬೆಂಗಳೂರು, ಗುರುವಾರ, ಡಿಸೆಂಬರ್ ೧, ೨೦೧೬ (ಮಾರ್ಗಶಿರ ೧೦, ಶಕ ವರ್ಷ ೧೯೩೮)	ನಂ. ೧೩೧೮
Part-IVA	**Bengaluru, Thursday, December 1, 2016 (Margasira 10, Shaka Varsha 1938)**	**No. 1318**

KARNATAKA LEGISLATIVE ASSEMBLY SECRETARIAT

NOTIFICATION

No. KLA/LGA/39/Bill/2016, Bengaluru, Dated: 01.12.2016

This following Bill was introduced in Legislative Assembly on 01.12.2016

ಕರ್ನಾಟಕ ವಿಧಾನಸಭೆ

ಹದಿನಾಲ್ಕನೇ ವಿಧಾನಸಭೆ

ಹನ್ನೆರಡನೇ ಅಧಿವೇಶನ

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ (ಎರಡನೇ ತಿದ್ದುಪಡಿ) ವಿಧೇಯಕ, 2016

(2016ರ ವಿಧಾನಸಭೆಯ ವಿಧೇಯಕ ಸಂಖ್ಯೆ-39)

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 36) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ (ಎರಡನೇ ತಿದ್ದುಪಡಿ) ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 15ನೇ ಪ್ರಕರಣದ ತಿದ್ದುಪಡಿ.- ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 36) 15ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿನ ಪರಂತುಕಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಪರಂತು, ಕೆಳಗಿನ ಕೋಷ್ಟಕದ (2)ನೇ ಕಾಲಂನಲ್ಲಿ ನಿರ್ದಿಷ್ಟಪಡಿಸಿದಂತೆ ಅಂದಾಜು ಖರ್ಚಿಗೆ (ಬಿ) ಅಥವಾ (ಸಿ) ಖಂಡದ ಅಡಿಯಲ್ಲಿನ ಯಾವುದೇ ಯೋಜನೆಯನ್ನು ಅದರ (3)ನೇ ಕಾಲಂನಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರದ ಅನುಮೋದನೆಯಿಲ್ಲದೆ ಮಂಡಲಿಯು ಕಾರ್ಯಗತಗೊಳಿಸತಕ್ಕದ್ದಲ್ಲ, ಎಂದರೆ:-

ಕೋಷ್ಟಕ

ಕ್ರಮ ಸಂಖ್ಯೆ (1)	ಯೋಜನೆ (2)	ಅನುಮೋದಿಸುವ ಪ್ರಾಧಿಕಾರ (3)
(1)	ಹಣ ನೀಡಿಕೆ ಮೂಲವನ್ನು ಗಣನೆಗೆ ತೆಗೆದುಕೊಳ್ಳದೆ ಹತ್ತು ಕೋಟಿ ರೂಪಾಯಿಗಳಿಗೂ ಹೆಚ್ಚಿನ ವೆಚ್ಚದ ಯೋಜನೆ.	ಸರ್ಕಾರದ ಸಚಿವ ಸಂಪುಟ ಹಂತದಲ್ಲಿ
(2)	ಸರ್ಕಾರದ ಅನುದಾನ ಮತ್ತು ಸಾಲಗಳಂತ ಹಣ ನೀಡಿಕೆ ಮೂಲದೊಂದಿಗೆ ಹತ್ತು ಕೋಟಿ ರೂಪಾಯಿಗಳಿಗಿಂತ ಕಡಿಮೆ ವೆಚ್ಚದ ಯೋಜನೆ.	ಸರ್ಕಾರ (ಆಡಳಿತ ಇಲಾಖೆ)

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 36) 15ನೇ ಪ್ರಕರಣವನ್ನು,-

(ಎ) ಹಣ ನೀಡಿಕೆ ಮೂಲಗಳನ್ನು ಗಣನೆಗೆ ತೆಗೆದುಕೊಳ್ಳದೆ, ಹತ್ತು ಕೋಟಿ ರೂಪಾಯಿಗಳಿಗೂ ಮೇಲಿನ ಯಾವುದೇ ಅಂದಾಜುಗಳ ಸಂದರ್ಭದಲ್ಲಿ ಸಚಿವ ಸಂಪುಟದ ಹಂತದಲ್ಲಿ ಸರ್ಕಾರದ ಅನುಮೋದನೆಯೊಂದಿಗೆ; ಮತ್ತು

(ಬಿ) ಸರ್ಕಾರದ ಅನುದಾನ ಮತ್ತು ಸಾಲಗಳಂತ ಹಣ ನೀಡಿಕೆ ಮೂಲಗಳೊಂದಿಗೆ ಹತ್ತು ಕೋಟಿ ರೂಪಾಯಿಗಳಿಗಿಂತ ಕಡಿಮೆ ವೆಚ್ಚದ ಅಂದಾಜುಗಳಿಗೆ ಸರ್ಕಾರದ ಆಡಳಿತ ಇಲಾಖೆಯ ಹಂತದ ಅನುಮೋದನೆಯೊಂದಿಗೆ,

-ಯೋಜನೆಗಳನ್ನು ಸಿದ್ಧಪಡಿಸಲು ಮತ್ತು ಕೈಗೊಳ್ಳಲು ಮಂಡಳಿಗೆ ಅಧಿಕಾರವನ್ನು ನೀಡುವುದಕ್ಕಾಗಿ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಕೆ.ಜೆ. ಜಾರ್ಜ್
ಬೆಂಗಳೂರು ಅಭಿವೃದ್ಧಿ ಹಾಗೂ ಪಟ್ಟಣ
ಮತ್ತು ಗ್ರಾಮಾಂತರ ಯೋಜನೆ ಮಂತ್ರಿಗಳು

ಎಸ್. ಮೂರ್ತಿ
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನಸಭೆ.

ಅನುಬಂಧ

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಅಧಿನಿಯಮ, 1964ರ
(1964ರ ಕರ್ನಾಟಕ ಅಧಿನಿಯಮ 36) ಉದ್ಧೃತ ಭಾಗ

Xx xx xx

15. ಮಂಡಳಿಯ ಸಾಮಾನ್ಯ ಕರ್ತವ್ಯಗಳು. xx xx xx

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ,-

(ಎ) ಬೆಂಗಳೂರು ಮಹಾನಗರ ಪ್ರದೇಶದಲ್ಲಿ ನೀರು ಸರಬರಾಜಿನ ಪರ್ಯಾಪ್ತತೆ ಮತ್ತು ಅದು ಆರೋಗ್ಯಕರವಾಗಿರುವ ಬಗ್ಗೆ ಸುನಿಶ್ಚಿತಪಡಿಸಿಕೊಳ್ಳುವುದಕ್ಕಾಗಿ;

(ಬಿ) ಬೆಂಗಳೂರು ಮಹಾನಗರ ಪ್ರದೇಶದೊಳಗೆ ಗೃಹಬಳಕೆಯ ಉದ್ದೇಶಗಳಿಗಾಗಿ ಆರೋಗ್ಯಕರವಾದ ನೀರು ಸರಬರಾಜಿಗಾಗಿ ಯೋಜನೆಗಳನ್ನು ತಯಾರಿಸುವುದು ಮತ್ತು ಕಾರ್ಯಗತಗೊಳಿಸುವುದಕ್ಕಾಗಿ;

(ಸಿ) ಬೆಂಗಳೂರು ಮಹಾನಗರ ಪ್ರದೇಶದಲ್ಲಿ ಸೂಕ್ತ ಚರಂಡಿ ವ್ಯವಸ್ಥೆಗಾಗಿ ಮತ್ತು ಗ್ರಾಮಸಾರದ ವಿಲೆಗಾಗಿ ಯೋಜನೆಗಳನ್ನು ತಯಾರಿಸುವುದು ಮತ್ತು ಕಾರ್ಯಗತಗೊಳಿಸುವುದಕ್ಕಾಗಿ

– ಕಾಲಕಾಲಕ್ಕೆ ಕ್ರಮಗಳನ್ನು ಕೈಗೊಳ್ಳುವುದು ಮಂಡಳಿಯ ಕರ್ತವ್ಯವಾಗಿರತಕ್ಕದ್ದು.

ಪರಂತು, ಒಂದು ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಅಂದಾಜು ಖರ್ಚಿನ (ಬಿ) ಅಥವಾ (ಸಿ) ಖಂಡದ ಮೇರೆಗಿನ ಯಾವುದೇ ಯೋಜನೆಯನ್ನು ರಾಜ್ಯ ಸರ್ಕಾರದ ಅನುಮೋದನೆಯ ಹೊರತು ಮಂಡಲಿಯು ಕಾರ್ಯಗತಗೊಳಿಸತಕ್ಕದ್ದಲ್ಲ.

Xx xx xx

KARNATAKA LEGISLATIVE ASSEMBLY
FOURTEENTH LEGISLATIVE ASSEMBLY
TWELFTH SESSION

THE BANGALORE WATER SUPPLY AND SEWERAGE (SECOND AMENDMENT) BILL, 2016

(L.A. Bill No. 39 of 2016)

A Bill further to amend the Bangalore Water Supply and Sewerage Act, 1964.

Whereas, it is expedient further to amend the Bangalore Water Supply and Sewerage Act, 1964 (Karnataka Act 36 of 1964) for the purposes hereinafter appearing:

Be it enacted by the Karnataka State Legislature in the sixty-seventh year of the Republic of India as follows:-

1. Short title and commencement.- (1) This Act may be called the Bangalore Water Supply and Sewerage (second Amendment) Act, 2016.

(2) It shall come into force at once.

2. Amendment of section 15.- In the Bangalore Water Supply and Sewerage Act, 1964 (Karnataka Act 36 of 1964) in section 15, in sub-section (2), for the proviso, the following shall be substituted, namely:-

“Provided that no scheme under clause (b) or (c) estimated to the cost as specified in column (2) of the Table below shall be carried out by the Board without approval of the Authority specified in column(3) thereof, namely:-

Table

SL. No. (1)	**Scheme (2)**	**Approving Authority (3)**
(1)	A scheme costing more than rupees ten crores irrespective of source of funding	Government Cabinet Level
(2)	A scheme costing less than rupees ten crores with Government grant or loan as source of funds	Government (Administrative Department)

STATEMENT OF OBJECTS AND REASONS

It is considered necessary to amend section 15 of the Bangalore Water Supply and Sewerage Board Act, 1964, to empower the Board to prepare and carryout scheme,-

(a) with the approval of the Government at cabinet level in respect of any estimates above ten crore rupees, irrespective of source of funds; and

(b) with the approval of the Government Administrative Department level to estimates of less than ten crore rupees with Government grants or loan as source of funds.

Hence the Bill.

FINANCIAL MEMORANDUM

There is no extra expenditure involved in the proposed legislative measure.

K.J.GEORGE
Minister for Bangalore Development
and Town and Country Planning

S.Murthy
Secretary (I/C)
Karnataka Legislative Assembly.

ANNEXURE
EXTRACT FROM THE BANGALORE WATER SUPPLY AND SEWERAGE ACT, 1964 (KARNATAKA ACT 36 OF 1964)

XX XX XX

15. General duties of the Board.— XX XX XX

(2) Without prejudice to the provisions of sub-section (1), it shall be the duty of the Board to take steps from time to time,—

(a) for ascertaining the sufficiency and wholesomeness of water supplies within the Bangalore Metropolitan Area;

(b)for preparing and carrying out schemes for the supply of wholesome water for domestic purposes within the Bangalore Metropolitan Area;

(c)for preparing and carrying out schemes for the proper sewerage of, and the disposal of the sewage of, theBangalore Metropolitan Area.

Provided that no scheme under clause (b) or (c) estimated to cost more than a crore of rupees shall be carried out by the Board except with the approval of the State Government.

xx xx xx

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಡಿ7) ಪ್ರತಿಗಳು: 150

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ–IVA	ಬೆಂಗಳೂರು, ಗುರುವಾರ, ಡಿಸೆಂಬರ್ ೧, ೨೦೧೬ (ಮಾರ್ಗಶಿರ ೧೦, ಶಕ ವರ್ಷ ೧೯೩೮)	ನಂ. ೧೩೧೯
Part–IVA	Bengaluru, Thursday, December 1, 2016 (Margasira 10, Shaka Varsha 1938)	No. 1319

KARNATAKA LEGISLATIVE ASSEMBLY SECRETARIAT

NOTIFICATION

No. KLA/LGA/40/Bill/2016, Bengaluru, Dated: 01.12.2016

This following Bill was introduced in Legislative Assembly on 01.12.2016

ಕರ್ನಾಟಕ ವಿಧಾನಸಭೆ

ಹದಿನಾಲ್ಕನೇ ವಿಧಾನಸಭೆ

ಹನ್ನೆರಡನೇ ಅಧಿವೇಶನ

ಕರ್ನಾಟಕ ಮರಗಳ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, 2016

(2016ರ ವಿಧಾನಸಭೆಯ ವಿಧೇಯಕ ಸಂಖ್ಯೆ–40)

ಕರ್ನಾಟಕ ಮರಗಳ ಸಂರಕ್ಷಣೆ ಅಧಿನಿಯಮ, 1976ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮರಗಳ ಸಂರಕ್ಷಣೆ ಅಧಿನಿಯಮ, 1976ನ್ನು (1976ರ ಕರ್ನಾಟಕ ಅಧಿನಿಯಮ 76) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–(1) ಈ ಅಧಿನಿಯಮವನ್ನು ಕರ್ನಾಟಕ ಮರಗಳ ಸಂರಕ್ಷಣೆ (ತಿದ್ದುಪಡಿ) ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 27ಎಎ ಹೊಸ ಪ್ರಕರಣದ ಸೇರ್ಪಡೆ.– ಕರ್ನಾಟಕ ಮರಗಳ ಸಂರಕ್ಷಣೆ ಅಧಿನಿಯಮ, 1976ರ (1976ರ ಕರ್ನಾಟಕ ಅಧಿನಿಯಮ 76) 27ಎ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"**27ಎಎ. ನೆಟ್ಟಿರುವ ಮರ ಪ್ರಭೇದಗಳ ಆಯ್ಕೆಯನ್ನು ನಿಯಂತ್ರಿಸಲು ರಾಜ್ಯ ಸರ್ಕಾರದ ಅಧಿಕಾರ.**–ಯಾವುವೇ ಮರ ಪ್ರಭೇದಗಳನ್ನು ನೆಡುವುದು, ಪಸರಿಸುವುದು ಅಥವಾ ಬೆಳೆಸುವುದು ಪರಿಸರ ಅಥವಾ ಅಂತರ್ಜಲ ಲಭ್ಯತೆಗೆ ಹಾನಿಕಾರಕವಾಗುತ್ತದೆಂದು ಅಥವಾ ಆ ಪ್ರಭೇದಗಳು ಅನ್ಯಜಾತಿಯ ಅಥವಾ ಆಕ್ರಮಣಶೀಲ ಪ್ರಭೇದಗಳ ಹರಡುವಿಕೆಗೆ ಕಾರಣವಾಗುತ್ತದೆಂದು ಅಥವಾ ಅದು ಪರಿಸರದ ನೈರ್ಮಲ್ಯಕ್ಕೆ ಪ್ರತಿಕೂಲವಾಗಿ ಬಾಧಿಸುವ ರೋಗಗಳಿಗೆ ಕಾರಣವಾಗುವಂತ ಕೀಟಗಳು ಮತ್ತು ವಾಹಕಗಳಿಗೆ ಪೋಷಕ ಅಥವಾ ಪರ್ಯಾಯ ಪೋಷಕವಾಗುತ್ತದೆಂದು, ರಾಜ್ಯ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯಲ್ಲಿ ಪರಿಗಣಿಸಿದರೆ, ಆಗ ಅದು ಅವಶ್ಯವೆಂದು ಭಾವಿಸಬಹುದಾದ ಅಂಥ ಪ್ರದೇಶಗಳಲ್ಲಿ ಮತ್ತು ಅಂಥ ಸಮಯಕ್ಕೆ ಆ ಮರ ಪ್ರಭೇದಗಳನ್ನು ನೆಡುವುದನ್ನು ಅಥವಾ ಬೆಳೆಸುವುದನ್ನು ಅಧಿಸೂಚನೆಯ ಮೂಲಕ ನಿಯಂತ್ರಿಸಬಹುದು."

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಪರಿಸರಕ್ಕೆ ಅಥವಾ ಅಂತರ್ಜಲ ಲಭ್ಯತೆಗೆ ಹಾನಿಯುಂಟು ಮಾಡುವ ಅಥವಾ ಅನ್ಯಜಾತಿಯ ಅಥವಾ ಆಕ್ರಮಣಶೀಲ ಪ್ರಭೇಧಗಳು ಹರಡಲು ಕಾರಣವಾಗುವ ಅಥವಾ ರೋಗಗಳನ್ನು ಉಂಟುಮಾಡಲು ಕಾರಣವಾಗುವ ಅಥವಾ ಪರಿಸರದ ನೈರ್ಮಲ್ಯತೆಗೆ ಪ್ರತಿಕೂಲವಾಗಿ ಪರಿಣಮಿಸುವ ಅಂಥ ಮರಗಳ ಪ್ರಭೇದಗಳನ್ನು ಅಂಥ ಪ್ರದೇಶಗಳಲ್ಲಿ ನೆಡುವುದನ್ನು ಅಥವಾ ಬೆಳೆಸುವುದನ್ನು ನಿಯಂತ್ರಿಸಲು ಕರ್ನಾಟಕ ಮರಗಳ ಸಂರಕ್ಷಣೆ ಅಧಿನಿಯಮ, 1976ನ್ನು (1976ರ ಕರ್ನಾಟಕ ಅಧಿನಿಯಮ 76) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಬಿ.ರಮಾನಾಥ ರೈ
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಮಂತ್ರಿಗಳು

ಎಸ್. ಮೂರ್ತಿ
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನಸಭೆ.

KARNATAKA LEGISLATIVE ASSEMBLY
FOURTEENTH LEGISLATIVE ASSEMBLY
TWELFTH SESSION

THE KARNATAKA PRESERVATION OF TREES (AMENDMENT) BILL, 2016

(L.A. Bill No. 40 of 2016)

A Bill further to amend the Karnataka Preservation of Trees Act, 1976.

Whereas it is expedient further to amend the Karnataka Preservation of Trees Act, 1976 (Karnataka Act 76 of 1976), for the purposes hereinafter appearing;

Be it enacted by the Karnataka State Legislature in the Sixty-seventh year of the Republic of India as follows:-

1. Short title and commencement.- (1) This Act may be called the Karnataka Preservation of Trees (Amendment) Act, 2016.

(2) It shall come into force at once.

2. Insertion of new section 27AA.- In the Karnataka Preservation of Trees Act, 1976 (Karnataka Act 76 of 1976), after section 27A the following shall be inserted, namely:-

" **27AA. Power of State Government to regulate the choice of species planted.-** The State Government may, if it considers necessary in public interest that planting, propagating or cultivating any tree species is detrimental to the environment or ground water availability, or the species is or liable to cause colonization of alien or invasive species, or is the host or alternate host for pests and vectors that can cause diseases adversely affecting the hygiene of the environment, by notification regulate the planting or cultivation of such species in such areas, and for such time as may be deemed necessary"

STATEMENT OF OBJECTS AND REASONS

It is considered necessary to amend the Karnataka Preservation of Trees Act, 1976 (Karnataka Act 76 of 1976) to regulate the planting or cultivation of trees in such areas of such species which are detrimental to environment, ground water or liable to cause colonization of alien and invasive species or causes diseases or adversely affect hygiene of the environment.

Hence the Bill,

FINANCIAL MEMORANDUM

There is no extra expenditure involved in the proposed Legislative measure.

B.RAMANATH RAI
Minister for Forest, Environment
and Ecology

S.Murthy
Secretary (I/C)
Karnataka Legislative Assembly.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 150

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ-IVA	ಬೆಂಗಳೂರು, ಗುರುವಾರ, ಡಿಸೆಂಬರ್ ೧, ೨೦೧೬ (ಮಾರ್ಗಶಿರ ೧೦, ಶಕ ವರ್ಷ ೧೯೩೮)	ನಂ. ೧೩೨೦
Part-IVA	**Bengaluru, Thursday, December 1, 2016 (Margasira 10, Shaka Varsha 1938)**	**No. 1320**

KARNATAKA LEGISLATIVE ASSEMBLY SECRETARIAT

NOTIFICATION

No. KLA/LGA/41/Bill/2016, Bengaluru, Dated: 01.12.2016

This following Bill was introduced in Legislative Assembly on 01.12.2016

ಕರ್ನಾಟಕ ವಿಧಾನಸಭೆ

ಹದಿನಾಲ್ಕನೇ ವಿಧಾನಸಭೆ

ಹನ್ನೆರಡನೇ ಅಧಿವೇಶನ

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ವಿಧೇಯಕ, 2016

(2016ರ ವಿಧಾನಸಭೆಯ ವಿಧೇಯಕ ಸಂಖ್ಯೆ-41)

ಎಲ್ಲ ಗ್ರಾಮೀಣ ಪ್ರದೇಶಗಳಲ್ಲಿನ ಕೃಷಿ ಕಛೇರಿಗಳಲ್ಲಿ ಕೃಷಿ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆಯನ್ನು ನಿಯಂತ್ರಿಸುವುದಕ್ಕಾಗಿ ಒಂದು ವಿಧೇಯಕ.

ಕರ್ನಾಟಕ ರಾಜ್ಯದಲ್ಲಿಯ ಗ್ರಾಮೀಣ ಪ್ರದೇಶಗಳಲ್ಲಿನ ಎಲ್ಲ ಕೃಷಿ ಕಛೇರಿಗಳಲ್ಲಿ ಸಿಬ್ಬಂದಿಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆಯನ್ನು ನಿಯಂತ್ರಿಸುವುದಕ್ಕಾಗಿ ಉಪಬಂಧವನ್ನು ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ಪರಿಭಾಷೆಗಳು.- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ನೇಮಕ" ಎಂದರೆ, ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ನೇರ ನೇಮಕಾತಿಯ ಅಥವಾ ಬಡ್ತಿಯ ಮೂಲಕ ಮಾಡಿದ ನೇಮಕ;

(ಬಿ) "ಸಕ್ಷಮ ಪ್ರಾಧಿಕಾರ" ಎಂದರೆ, ಗ್ರೂಪ್-ಎ ಹುದ್ದೆಗಳ ಸಂಬಂಧದಲ್ಲಿ ಸರ್ಕಾರ ಮತ್ತು ಗ್ರೂಪ್ ಬಿ, ಸಿ ಮತ್ತು ಡಿ ಹುದ್ದೆಗಳ ಸಂಬಂಧದಲ್ಲಿ ಕೃಷಿ ಆಯುಕ್ತರು;

(ಸಿ) "ನಿರ್ಣಾಯಕ ಖಾಲಿ ಹುದ್ದೆ" ಎಂದರೆ,-

(i) ರೈತ ಸಂಪರ್ಕ ಕೇಂದ್ರಗಳಲ್ಲಿನ ಅಧಿಕಾರಿಗಳು ಮತ್ತು ಸಿಬ್ಬಂದಿಯ ಎಲ್ಲಾ ಹುದ್ದೆಗಳು;

(ii) ತಾಲ್ಲೂಕು ಕೃಷಿ ಸಹಾಯಕ ನಿರ್ದೇಶಕರ ಎಲ್ಲಾ ಹುದ್ದೆಗಳು; ಮತ್ತು

(iii) ಪ್ರತಿ ವೃಂದದಲ್ಲೂ ನಿಯಮಿಸಲಾದ ಶೇಕಡಾವಾರು ಹುದ್ದೆಗಿಂತ ಹೆಚ್ಚಾಗಿರುವ ವೃಂದದ ಖಾಲಿ ಹುದ್ದೆಗಳು, ಸರಾಸರಿ ಶೇಕಡಾವಾರು ಹುದ್ದೆಗಿಂತಲೂ ಹೆಚ್ಚಾಗಿರುವ ಇತರ ಜಿಲ್ಲೆಗಳು ಅಥವಾ ತಾಲ್ಲೂಕುಗಳಲ್ಲಿ ಸರ್ವೇಸಾಮಾನ್ಯವಾದ ಖಾಲಿ ಹುದ್ದೆಗಳು.

(ಡಿ) "ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ;

(ಇ) "ಸರ್ಕಾರಿ ಸಂಸ್ಥೆ" ಎಂದರೆ, ಸರ್ಕಾರವು ಸ್ಥಾಪಿಸಿದ ಯಾವುದೇ ಹೆಸರಿನಿಂದ ಕರೆಯಲಾಗುವ ತರಬೇತಿ ಕೇಂದ್ರ, ಆಡಳಿತ ಕಚೇರಿ ಅಥವಾ ಯಾವುವೇ ಇತರ ಸಂಸ್ಥೆಗಳು ಅಥವಾ ಯಾವುವೇ ಇತರ ಕಚೇರಿಗಳು ಮತ್ತು ಅದು ಇವುಗಳನ್ನು ಒಳಗೊಳ್ಳುತ್ತದೆ;

(ಎಫ್) "ಅಧಿಕಾರಿ ಮತ್ತು ಇತರ ಸಿಬ್ಬಂದಿ" ಎಂದರೆ, ಅನುಸೂಚಿ–I ಮತ್ತು ಅನುಸೂಚಿ–IIರಲ್ಲಿ ನಿರ್ದಿಷ್ಟಪಡಿಸಿದ ಹುದ್ದೆಗಳ ಯಾವುದೇ ಪ್ರವರ್ಗಕ್ಕೆ ನೇಮಕಾತಿ ಪ್ರಾಧಿಕಾರವು ನೇಮಕ ಮಾಡಿದ ಕೃಷಿ ಇಲಾಖೆಯ ಅಧಿಕಾರಿ ಮತ್ತು ಇತರ ಸಿಬ್ಬಂದಿ;

(ಜಿ) "ಕೌನ್ಸಿಲಿಂಗ್ ಪ್ರಕ್ರಿಯೆ" ಎಂದರೆ, ನೇಮಕಾತಿಗಾಗಿ ಅಥವಾ ವರ್ಗಾವಣೆಗಾಗಿ ಪರಿಗಣಿಸಲ್ಪಟ್ಟ ವ್ಯಕ್ತಿಯೊಬ್ಬರಿಗೆ, ಆತನು ಕಾರ್ಯನಿರ್ವಹಿಸುತ್ತಿರುವ ವಲಯದ ಸ್ಥಳದಲ್ಲಿ ಆತನು ಸಲ್ಲಿಸಿದ ಸೇವಾವಧಿಯ ಮತ್ತು ನಿಯಮಿಸಬಹುದಾದಂಥ ಇತರ ಮಾನದಂಡಗಳ ಆಧಾರದಲ್ಲಿ, ಆದ್ಯತೆಯ ಮೇರೆಗೆ ಸರ್ಕಾರವು ಅಧಿಸೂಚಿಸಿದ ಸ್ಥಳ ಅಥವಾ ಹುದ್ದೆಯನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವನ್ನು ನೀಡುವ ಪ್ರಕ್ರಿಯೆ;

(ಹೆಚ್) "ಗ್ರಾಮೀಣ ಪ್ರದೇಶ" ಎಂದರೆ, ನಗರ ಪ್ರದೇಶವನ್ನು ಹೊರತುಪಡಿಸಿದ ಇತರ ಪ್ರದೇಶ;

(ಐ) "ವರ್ಗಾವಣೆ" ಎಂದರೆ, ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯನ್ನು ಒಂದು ಕೆಲಸದ ಸ್ಥಳದಿಂದ ಇನ್ನೊಂದು ಕೆಲಸದ ಸ್ಥಳಕ್ಕೆ ಸ್ಥಳನಿಯುಕ್ತಿಗೊಳಿಸುವುದು;

(ಜೆ) "ಪ್ರತಿನಿಯೋಜನೆ ಮೇಲೆ ವರ್ಗಾವಣೆ" ಎಂದರೆ, ಇತರ ಇಲಾಖೆಗಳಿಗೆ ಅಥವಾ ನಿಗಮಗಳಿಗೆ ಅಥವಾ ಮಂಡಳಿಗಳಿಗೆ ಅಥವಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಕ್ಕೆ ಅಥವಾ ಇತರ ಸರ್ಕಾರಿ ಸಂಸ್ಥೆಗಳಿಗೆ ಐದು ವರ್ಷಗಳಿಗಿಂತ ಹೆಚ್ಚಾಗಿರದ ಅವಧಿಗಾಗಿ ಪ್ರತಿನಿಯೋಜನೆಯ ಮೇಲೆ ಅಧಿಕಾರಿಗಳ ಮತ್ತು ಇತರ ಸಿಬ್ಬಂದಿಯ ವರ್ಗಾವಣೆ;

(ಕೆ) "ನಗರ ಪ್ರದೇಶ" ಎಂದರೆ, ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ರ ಅಥವಾ ಕರ್ನಾಟಕ ಪೌರ ಸಭೆಗಳ ಅಧಿನಿಯಮ, 1964ರ ಅಡಿಯಲ್ಲಿ ಸ್ಥಾಪಿಸಲಾದಂತೆ ನಗರ ಪಾಲಿಕೆ, ನಗರ ಸಭಾ ಪರಿಷತ್ತು, ಪಟ್ಟಣ ಪುರಸಭೆ ಅಥವಾ ಪಟ್ಟಣ ಪಂಚಾಯತ್‌ಗಳ ಮಿತಿಗಳೊಳಗೆ ಇರುವ ಯಾವುದೇ ಪ್ರದೇಶ ಮತ್ತು ಇದು ಸರ್ಕಾರವು ಕಾಲಕಾಲಕ್ಕೆ ಹಾಗೆಂದು ಅಧಿಸೂಚಿಸಿದ ಪ್ರದೇಶ ಮಿತಿಗಳಿಂದ ಅಂಥ ದೂರದವರೆಗೆ ಇರುವ ಯಾವುದೇ ಪ್ರದೇಶವನ್ನು ಒಳಗೊಳ್ಳುತ್ತದೆ;

(ಎಲ್) "ವಲಯ" ಎಂದರೆ, ಈ ಕೆಳಗೆ ವರ್ಗೀಕರಿಸಿದ ಯಾವುದೇ ಪ್ರದೇಶ, ಎಂದರೆ:–

(i) "ವಲಯ–ಎ" ಎಂದರೆ, ನಗರ ಪಾಲಿಕೆ ಅಥವಾ ನಗರ ಸಭೆಯ ಮಿತಿಯೊಳಗಿನ ನಗರ ಪ್ರದೇಶ;

(ii) "ವಲಯ–ಬಿ" ಎಂದರೆ, ಪಟ್ಟಣ ಪುರಸಭೆ ಮತ್ತು ಪಟ್ಟಣ ಪಂಚಾಯತ್ ಮಿತಿಯೊಳಗಿನ ನಗರ ಪ್ರದೇಶ; ಮತ್ತು

(iii) "ವಲಯ–ಸಿ" ಎಂದರೆ, ವಲಯ–ಎ ಮತ್ತು ವಲಯ–ಬಿ ಅಡಿಯಲ್ಲಿ ಒಳಗೊಂಡಿರದ ಎಲ್ಲ ಇತರ ಪ್ರದೇಶ;

(ಎಂ) "ಅನುಸೂಚಿ" ಎಂದರೆ, ಈ ಅಧಿನಿಯಮಕ್ಕೆ ಅನುಬಂಧಿಸಿದ ಅನುಸೂಚಿ.

3. ಕೌನ್ಸಿಲಿಂಗ್ ಮೂಲಕ ಪ್ರಾರಂಭಿಕ ನೇಮಕಾತಿ, ಬಡ್ತಿ ಮತ್ತು ವರ್ಗಾವಣೆ.– ಈ ಅಧಿನಿಯಮದ ಅಡಿಯಲ್ಲಿ ಅಧಿಕಾರಿಗಳ ಮತ್ತು ಇತರ ಸಿಬ್ಬಂದಿಯ ಪ್ರಾರಂಭಿಕ ನೇಮಕಾತಿ, ಬಡ್ತಿ ಮತ್ತು ವರ್ಗಾವಣೆಯನ್ನು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಕೌನ್ಸಲಿಂಗ್ ಪ್ರಕ್ರಿಯೆ ನಡೆಸುವ ಮೂಲಕ ಮಾಡತಕ್ಕದ್ದು.

4. ಕಡ್ಡಾಯ ಸೇವೆಗಾಗಿ ಉಪಬಂಧಗಳು.– (1) IIIನೇ ಅನುಸೂಚಿಯ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಪ್ರತಿಯೊಬ್ಬ ಅಧಿಕಾರಿ ಮತ್ತು ಇತರ ಸಿಬ್ಬಂದಿಯು, ಅದರ (3)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ವಲಯಗಳಲ್ಲಿ ಕನಿಷ್ಠ ಸಂಖ್ಯೆಯ ವರ್ಷಗಳವರೆಗೆ ಕಡ್ಡಾಯವಾಗಿ ಸೇವೆಯನ್ನು ಸಲ್ಲಿಸತಕ್ಕದ್ದು.

(2) IIIನೇ ಅನುಸೂಚಿಯ (3)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಸಂಖ್ಯೆಯ ವರ್ಷಗಳನ್ನು ಪೂರ್ಣಗೊಳಿಸಿದ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯನ್ನು ಸಾರ್ವಜನಿಕ ಹಿತಾಸಕ್ತಿಯಲ್ಲಿ ವರ್ಗಾವಣೆ ಮಾಡಲು ಸರ್ಕಾರವು ಅಧಿಕಾರವನ್ನು ಹೊಂದಿರತಕ್ಕದ್ದು.

5. ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ಕಡ್ಡಾಯ ಸೇವೆ.– (1) ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ಪ್ರಾರಂಭಿಕ ನೇಮಕಾತಿ ಅಥವಾ ಬಡ್ತಿ ಅಥವಾ ವರ್ಗಾವಣೆಯನ್ನು ಮಾಡುವಾಗ ಸಕ್ಷಮ ಪ್ರಾಧಿಕಾರವು IIIನೇ

ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ವಲಯಗಳಲ್ಲಿರುವ ಖಾಲಿ ಹುದ್ದೆಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಅಂಥ ಖಾಲಿ ಹುದ್ದೆಗಳನ್ನು ಪ್ರಥಮತಃ ಭರ್ತಿ ಮಾಡತಕ್ಕದ್ದು. ಪ್ರಾರಂಭಿಕ ನೇಮಕಾತಿ ಅಥವಾ ಬಡ್ತಿ ಅಥವಾ ವರ್ಗಾವಣೆಯನ್ನು ಮೊದಲು ಸಿ-ವಲಯಕ್ಕೆ ಮಾಡತಕ್ಕದ್ದು. ಆ ಪ್ರವರ್ಗಕ್ಕೆ ಸೇರಿದ ಖಾಲಿ ಹುದ್ದೆಗಳು ಇಲ್ಲದಿದ್ದರೆ, ನಂತರ ಬಿ-ವಲಯದಲ್ಲಿನ ಖಾಲಿ ಹುದ್ದೆಗಳಿಗೆ ಮತ್ತು ಆನಂತರ ಎ-ವಲಯದಲ್ಲಿನ ಖಾಲಿ ಹುದ್ದೆಗಳಿಗೆ, ಹುದ್ದೆಯ ಪ್ರವರ್ಗದ ಅಧಿಕಾರ ವ್ಯಾಪ್ತಿಯನ್ನಾಧರಿಸಿ, ವರ್ಗಾವಣೆ ಮಾಡತಕ್ಕದ್ದು.

(2) ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಸೇವೆಯಲ್ಲಿರುವ ಮತ್ತು ಈ ಅಧಿನಿಯಮದ ಪ್ರಾರಂಭದ ದಿನಾಂಕಕ್ಕೆ ಮೊದಲು ಅನುಸೂಚಿ-IIIರಲ್ಲಿ ನಿರ್ದಿಷ್ಟಪಡಿಸಿದ ವಲಯದಲ್ಲಿ ಕನಿಷ್ಠ ಸಂಖ್ಯೆಯ ವರ್ಷಗಳವರೆಗೆ ಸೇವೆಯನ್ನು ಸಲ್ಲಿಸದಿರುವ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯನ್ನು ಅಂಥ ವಲಯಕ್ಕೆ ವರ್ಗಾಯಿಸತಕ್ಕದ್ದು:

ಪರಂತು, ಅನುಸೂಚಿ-IIIರಲ್ಲಿ ನಿರ್ದಿಷ್ಟಪಡಿಸಿದ ವಲಯಕ್ಕೆ ಅಧಿಕಾರಿಗಳ ಮತ್ತು ಇತರ ಸಿಬ್ಬಂದಿಯ ಕಡ್ಡಾಯ ವರ್ಗಾವಣೆಗೆ ಸಂಬಂಧಿಸಿದ ಉಪಬಂಧಗಳನ್ನು,-

(i) ಐವತ್ತೈದು ವರ್ಷಗಳ ವಯಸ್ಸಿನವನಾದ ವ್ಯಕ್ತಿಗೆ;

(ii) ಪತಿ ಮತ್ತು ಪತ್ನಿಯರಿಬ್ಬರು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ನೌಕರರಾಗಿರುವ ಸಂದರ್ಭದಲ್ಲಿ, ದಂಪತಿಗಳಲ್ಲಿ ಒಬ್ಬರು ಬೇರೆ ಸ್ಥಳದಲ್ಲಿ ಕೆಲಸ ಮಾಡುತ್ತಿದ್ದರೆ, ಆಗ ಇನ್ನೊಬ್ಬ ಸಂಗಾತಿಯನ್ನು, ಸ್ಪಷ್ಟ ಖಾಲಿ ಹುದ್ದೆಯ ಲಭ್ಯತೆಗೆ ಒಳಪಟ್ಟು, ಆತನು ಅದೇ ಸ್ಥಳದಲ್ಲಿದ್ದರೆ, ಅದೇ ಸ್ಥಳಕ್ಕೆ ಅಥವಾ ಹತ್ತಿರದ ಸ್ಥಳಕ್ಕೆ ವರ್ಗಾಯಿಸಬಹುದಾದ ಪ್ರಕರಣಕ್ಕೆ;

(iii) ಆಕೆಯು ವಿಧವೆಯಾಗಿದ್ದರೆ ಆ ನೌಕರಳಿಗೆ;

(iv) ಆತನು ವಿಕಲಚೇತನನಾಗಿದ್ದರೆ ಆ ನೌಕರನಿಗೆ;

(v) ನೌಕರನ ಪತ್ನಿ ಅಥವಾ ಮಕ್ಕಳು ಗಂಭೀರ ಖಾಯಿಲೆಯಿಂದ ನರಳುತ್ತಿದ್ದು, ಅದಕ್ಕಾಗಿ ಆತನು ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿ ವೈದ್ಯಕೀಯ ಚಿಕಿತ್ಸೆ ಲಭ್ಯವಿರದಿರುವ ಮತ್ತು ಅಗತ್ಯ ವೈದ್ಯಕೀಯ ಚಿಕಿತ್ಸೆ ಒದಗಿಸುವ ಸಲುವಾಗಿ ಅಂಥ ಚಿಕಿತ್ಸೆ ಲಭ್ಯವಿರುವ ಸ್ಥಳಕ್ಕೆ ವರ್ಗಾವಣೆ ಮಾಡುವುದು ಅವಶ್ಯಕವಾಗಿರುವ ನೌಕರನಿಗೆ,

-ಅನ್ವಯವಾಗತಕ್ಕದಲ್ಲ:

ಮತ್ತು ಪರಂತು, ಖಾಯಿಲೆಯ ಸ್ವರೂಪವನ್ನು ನಿರ್ದಿಷ್ಟಪಡಿಸಿ, ಆತನು ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿ ಅಗತ್ಯ ಚಿಕಿತ್ಸೆ ಲಭ್ಯವಿಲ್ಲವೆಂಬ ವಾಸ್ತವವನ್ನು ಹೇಳಿ, ಯಾವ ಸ್ಥಳದಲ್ಲಿ ಅಗತ್ಯ ಚಿಕಿತ್ಸೆ ಲಭ್ಯವಿದೆಯೆಂದು ನಿರ್ದಿಷ್ಟಪಡಿಸಿ ಮತ್ತು ಅಗತ್ಯ ವೈದ್ಯಕೀಯ ಚಿಕಿತ್ಸೆಯನ್ನು ಆತನಿಗೆ ಒದಗಿಸುವ ಅಂಥ ಸ್ಥಳಕ್ಕೆ ಆತನನ್ನು ವರ್ಗಾವಣೆ ಮಾಡುವುದು ಅವಶ್ಯಕವೆಂದು ಪ್ರಮಾಣೀಕರಿಸಿ, ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ನೌಕರನು ಹಾಜರುಪಡಿಸಿದ ಹೊರತು ಯಾವುದೇ ವರ್ಗಾವಣೆಯನ್ನು ಪರಿಗಣಿಸತಕ್ಕದಲ್ಲ.

(3) ಯಾರೇ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯು, ತನ್ನ ಸ್ವಂತ ತಾಲ್ಲೂಕಿನಲ್ಲಿ ನಿಯೋಜನೆಗೆ ಹಕ್ಕುಳ್ಳವರಾಗಿರತಕ್ಕದಲ್ಲ:

ಪರಂತು, ವಯೋನಿವೃತ್ತಿಗೆ ಎರಡು ವರ್ಷಗಳಿಗಿಂತ ಕಡಿಮೆ ಸೇವಾವಧಿಯನ್ನು ಹೊಂದಿರುವ ವ್ಯಕ್ತಿಯನ್ನು ಆತನ ಸ್ವಂತ ತಾಲ್ಲೂಕಿಗೆ ಸ್ಥಳನಿಯುಕ್ತಿಗೊಳಿಸಬಹುದು.

(4) ಕಡ್ಡಾಯ ಸೇವೆ ಅಗತ್ಯವಿರುವ ಹುದ್ದೆಯ ಸಂಬಂಧದಲ್ಲಿ ಪ್ರಾರಂಭಿಕ ನೇಮಕಾತಿ ಅಥವಾ ಬಡ್ತಿ ಅಥವಾ ವರ್ಗಾವಣೆಗಾಗಿ ಯಾವುದೇ ಖಾಲಿ ಸ್ಥಳ ಲಭ್ಯವಿರದಿದ್ದರೆ, ಎ-ವಲಯದಲ್ಲಿ ಗರಿಷ್ಠ ಸಂಖ್ಯೆಯ ಸೇವಾವಧಿಯನ್ನು ಪೂರ್ಣಗೊಳಿಸಿರುವ ಅಧಿಕಾರಿಯ ಮತ್ತು ಇತರ ಸಿಬ್ಬಂದಿಯ ಹುದ್ದೆಯನ್ನು ಸಿ-ವಲಯಕ್ಕೆ ಮತ್ತು ಅದೇರೀತಿಯಾಗಿ ಸಿ-ವಲಯದಿಂದ ಬಿ-ವಲಯಕ್ಕೆ ಹಾಗೂ ಬಿ-ವಲಯದಿಂದ ಎ-ವಲಯಕ್ಕೆ ವರ್ಗಾವಣೆ ಮಾಡುವ ಮೂಲಕ ಖಾಲಿ ಹುದ್ದೆಯನ್ನು ಸೃಜಿಸಬಹುದು:

ಪರಂತು, ಸಿ-ವಲಯದಲ್ಲಿರುವ ಯಾವೊಬ್ಬ ವ್ಯಕ್ತಿಯು, ಸಿ-ವಲಯದಲ್ಲಿಯೇ ಮುಂದುವರೆಯಲು ಇಚ್ಛಿಸಿದರೆ, ಆತನು ಅದೇ ವಲಯದಲ್ಲಿಯೇ ಸೇವೆ ಸಲ್ಲಿಸಲು ಅನುಮತಿಸಬಹುದು.

(5) ವರ್ಗಾವಣೆಯು ಸೇವಾ ಅವಧಿಯನ್ನು ಮತ್ತು ನಿಯಮಿಸಬಹುದಾದ ಅಂಥ ಇತರ ಮಾನದಂಡಗಳನ್ನು ಆಧರಿಸಿರತಕ್ಕದ್ದು.

6. ಸಾರ್ವಜನಿಕ ಹಿತಾಸಕ್ತಿಯಲ್ಲಿ ಅಧಿಕಾರಿಗಳ ಮತ್ತು ಇತರ ಸಿಬ್ಬಂದಿಯ ವರ್ಗಾವಣೆ.- (1) ಈ ಅಧಿನಿಯಮದ ಪಾರಂಭದ ದಿನಾಂಕದಂದು ಸೇವೆಯಲ್ಲಿರುವ ಮತ್ತು ಒಂದು ಪ್ರದೇಶ ಅಥವಾ ಒಂದು ವಲಯದಲ್ಲಿನ ಸರ್ಕಾರಿ ಕಛೇರಿಯಲ್ಲಿ ಅಥವಾ ಸರ್ಕಾರಿ ಸಂಸ್ಥೆಯಲ್ಲಿ ಅಗತ್ಯವಿರುವ ಕನಿಷ್ಠ ಸಂಖ್ಯೆಯ ವರ್ಷಗಳ ನಿರಂತರ ಸೇವೆಯನ್ನು ಪೂರ್ಣಗೊಳಿಸಿದ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯನ್ನು ಸಾರ್ವಜನಿಕ ಹಿತಾಸಕ್ತಿಯಲ್ಲಿ, ಅವರ ಸೇವಾವಧಿಯನ್ನು ಮತ್ತು ನಿಯಮಿಸಬಹುದಾಂಥ ಮಾನದಂಡಗಳನ್ನು ಪರಿಗಣಿಸಿ ಅದೇ ವಲಯದಲ್ಲಿನ ಅಥವಾ ಮುಂದಿನ ವಲಯ ಅಥವಾ

ಪ್ರದೇಶದಲ್ಲಿನ ಬೇರೊಂದು ಸರ್ಕಾರಿ ಕಛೇರಿ ಅಥವಾ ಸರ್ಕಾರಿ ಸಂಸ್ಥೆಗಳಿಗೆ ಕೌನ್ಸಲಿಂಗ್ ಪ್ರಕ್ರಿಯೆಯ ಮೂಲಕ ವರ್ಗಾವಣೆ ಮಾಡಬಹುದು:

ಪರಂತು, ಆ ವರ್ಷದಲ್ಲಿನ ಅಂಥ ವರ್ಗಾವಣೆಗಳ ಒಟ್ಟು ಸಂಖ್ಯೆಯು, ಆ ಹುದ್ದೆಯ ಪ್ರವರ್ಗದಲ್ಲಿನ ಕೇಡರ್ ಸಾಮರ್ಥ್ಯದ ಸಂಖ್ಯೆಯ ಶೇಕಡಾ ಹತ್ತರಷ್ಟನ್ನು ಮೀರತಕ್ಕದ್ದಲ್ಲ.

ಮತ್ತು ಪರಂತು, ಕೌನ್ಸಿಲಿಂಗ್ ಪ್ರಕ್ರಿಯೆಯಲ್ಲಿ ಯಾವೊಬ್ಬ ಸೂಕ್ತ ಅಧಿಕಾರಿ ಅಥವಾ ಇತರ ಸಿಬ್ಬಂದಿಯು ಯಾವುದೇ ಸ್ಥಳವನ್ನು ಅಥವಾ ಹುದ್ದೆಯನ್ನು ಆಯ್ಕೆ ಮಾಡಿಕೊಳ್ಳದಿದ್ದಲ್ಲಿ, ಸಕ್ಷಮ ಪ್ರಾಧಿಕಾರವು ಅಂಥ ಹುದ್ದೆಗೆ ತನ್ನ ವಿವೇಚನೆಯಲ್ಲಿ ಯಾವೊಬ್ಬ ಸೂಕ್ತ ಅಧಿಕಾರಿ ಅಥವಾ ಸಿಬ್ಬಂದಿಯನ್ನು ವರ್ಗಾಯಿಸುವುದಕ್ಕೆ ಅಧಿಕಾರವನ್ನು ಹೊಂದಿರತಕ್ಕದ್ದು.

(2) ಅಮಾನತ್ತಿನಿಂದ ಪುನಃಸ್ಥಾಪನೆಯ (reinstatement) ಮೇಲಿರುವ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯನ್ನು ಉನ್ನತ ವಲಯಕ್ಕೆ ನಿಯೋಜಿಸತಕ್ಕದ್ದಲ್ಲ.

ವಿವರಣೆ.– ಉನ್ನತ ವಲಯ ಎಂದರೆ, ಅಮಾನತ್ತಿಗೆ ಮೊದಲು ಅಧಿಕಾರಿಯು ಅಥವಾ ಇತರ ಸಿಬ್ಬಂದಿಯು ಯಾವ ವಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದರೊ ಆ ವಲಯಕ್ಕಿಂತ ಉನ್ನತ ವಲಯ. ಎ–ವಲಯವನ್ನು ಬಿ–ವಲಯಕ್ಕಿಂತ ಉನ್ನತ ವಲಯವೆಂದು ಮತ್ತು ಬಿ–ವಲಯವು ಸಿ–ವಲಯಕ್ಕಿಂತ ಉನ್ನತ ವಲಯವೆಂದು ಪರಿಗಣಿಸತಕ್ಕದ್ದು.

(3) ಸಾರ್ವಜನಿಕ ಹಿತಾಸಕ್ತಿಯಲ್ಲಿ ಅಧಿಕಾರಿ ಮತ್ತು ಇತರ ಸಿಬ್ಬಂದಿಯ ವರ್ಗಾವಣೆಯನ್ನು ಪರಿಗಣಿಸುವಾಗ, ನಿರ್ಣಾಯಕ ಖಾಲಿಹುದ್ದೆಗಳನ್ನು ಭರ್ತಿ ಮಾಡಲು ಆದ್ಯತೆಯನ್ನು ನೀಡತಕ್ಕದ್ದು.

(4) ಸಾಮಾನ್ಯವಾಗಿ, ವರ್ಗಾವಣೆಗಳನ್ನು ಸಾಮಾನ್ಯ ವರ್ಗಾವಣೆ ಅವಧಿಯಲ್ಲಿ, ಎಂದರೆ ಪ್ರತಿ ವರ್ಷದ ಏಪ್ರಿಲ್ ಮತ್ತು ಮೇ ತಿಂಗಳ ಅವಧಿಯಲ್ಲಿ ಮಾಡತಕ್ಕದ್ದು:

ಪರಂತು, ತುರ್ತು ಅವಶ್ಯಕತೆಯ ಅವಧಿಯಲ್ಲಿ ರಾಜ್ಯ ಸರ್ಕಾರವು, ಆದೇಶದ ಮೂಲಕ ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ಅವಧಿಯವರೆಗೆ ಸಾಮಾನ್ಯ ವರ್ಗಾವಣೆ ಅವಧಿಯನ್ನು ವಿಸ್ತರಿಸಬಹುದು.

